ಜಿಲ್ಲೆಗೆ ಸಂಬಂಧಪಟ್ಟಂತೆ ಏನು ಸಮಸ್ಯೆ ಉಲ್ಬಣವಾಗಿದೆ, ಇದೇ ವಾರದಲ್ಲಿ ನಾನು ಒಂದು ಸಭೆಯನ್ನು ಮಾಡಿ ಪರಿಹಾರವನ್ನು ಹುಡುಕುವ ಪ್ರಯತ್ನವನ್ನು ನಾನು ಮಾಡುತ್ತೇನೆ. ಅದಕ್ಕಾಗಿ ಮಾನ್ಯ ಸದಸ್ಯರಾದ ಶ್ರೀ ಕೆ.ಜಿ. ಬೋಪಯ್ಯನವರು ಏನು ಸಮಸ್ಯೆಯನ್ನು ಎತ್ತಿದ್ದಾರೆ, ಇವತ್ತು ಅಲ್ಲಿ ತೊಂದರೆಯಾಗಿದ್ದು ಅದು ನಮ್ಮ ಗಮನಕ್ಕೂ ಕೂಡ ಬಂದಿದೆ. ಅಲ್ಲಿ ಆ ರೀತಿಯಾಗಿ ತೊಂದರೆಯಾಗದ ರೀತಿಯಲ್ಲಿ ಕೊಡಗು ಜನರ ಏನು ಹಿತಾಸಕ್ತಿಗಳು ಇವೆ, ಅದನ್ನು ರಕ್ಷಣೆ ಮಾಡುವ ರೀತಿಯಲ್ಲಿ ನಾವೆಲ್ಲಾ ಕ್ರಮವನ್ನು ಕೈಗೊಳ್ಳುತ್ತೇವೆ. ಇದೇ ವಾರದಲ್ಲಿ ಒಂದು ಸಭೆಯನ್ನು ಮಾಡಿ ಇದಕ್ಕೆ ಒಂದು ಪರಿಹಾರವನ್ನು ಹುಡುಕುವ ದಿಕ್ಕಿನಲ್ಲಿ ಪ್ರಯತ್ನವನ್ನು ನಾನು ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು :- ಮಾನ್ಯ ಮಾಧುಸ್ವಾಮಿಯವರೆ ತಾವು ಮಾತನಾಡಿ.

(ಗೊಂದಲ)

ಅಧ್ಯಕ್ಷರು :- ಎಲ್ಲರಿಗೂ ಮಾತನಾಡಲು ಅವಕಾಶವನ್ನು ಮಾಡಿಕೊಡುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ, ನಿಮಯ 69 ರ ಅಡಿಯಲ್ಲಿ ಮಾತನಾಡಲು ಮಾನ್ಯ ಮಾಧುಸ್ವಾಮಿಯವರನ್ನು ನಾನು ಈಗಾಗಲೇ ಕರೆದಿದ್ದೇನೆ.

11. ನಿಯಮ 69 ರ ಮೇರೆಗೆ ಚರ್ಚೆ :

ವಿಷಯ :- ಇಸ್ಕಾನ್‌ನಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ :

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :- ಮಾನ್ಯ ಅಧ್ಯಕ್ಷರೆ, ಆಕಸ್ಮಾತ್ ಆಗಿ ಬೆಳಿಗ್ಗೆ ಅಡ್ಜರ್‌ಮೆಂಟ್ ಮೋಷನ್‌ನ್ನು ಮೂವ್ ಮಾಡಿ ಅದು ವಾಪಾಸ್ ಹೋದರೆ ನಾನು ಎಲ್ಲಿ ಶಾಮೀಲಾಗಿದ್ದೇನೆಂದು ಜನರು ತಿಳಿದುಕೊಳ್ಳುತ್ತಾರೆಂದು ಹೇಳಿ, ಇನ್ಯಾರಾದರೋ ಶಾಮೀಲಾಗಿದ್ದರೆ ಅದು ಅವರ ಹಣೆಬರಹ ಎಂದು ಗೊತ್ತಾಗಲಿ ಎಂದು ಒಳಗೆ ಬಂದಿದ್ದೇನೆ. ಇದನ್ನು ನಾನು ತಮಗೆ ಸ್ಪಷ್ಟಪಡಿಸುತ್ತಿದ್ದೇನೆ. ರೈಸ್ ಮಾಡಿದ ಹಾಗೆ ಮಾಡಿ ನಾವು ಆಚೆಗೆ ಹೋದರೆ ಏನೋ ನಾವೆಲ್ಲರೂ ಶಾಮೀಲಾಗಿ ಇಷ್ಟೆಲ್ಲಾ ಮಾತನಾಡಿದವರು, ವಾಪಸ್ಸು ಹೋದರು ಎಂದು ಅನಿಸಿಕೊಳ್ಳಬಾರದು ಎಂದು ಒಂದೇ ಒಂದು ಗೌರವಕ್ಕೆ ಈ ಸಭೆಗೆ ಬಂದು ಮಾತನಾಡುತ್ತಿದ್ದೇನೆ. ಅದು ತಮಗೆ ಅರಿವಾದರೆ ನಮ್ಮ ಪುಣ್ಯವೆಂದು ತಿಳಿದುಕೊಳ್ಳುತ್ತೇನೆ.

ಈ ಪಾಪಗಳನ್ನು ಶಾಸನಸಭೆಯಲ್ಲಿ ತಾವು ಇನ್ನು ಮುಂದೆ ನಮ್ಮ ಹತ್ತಿರ ಮಾಡಿಸಬಾರದು.

ನಾನು ಬೆಳಿಗ್ಗೆ ಮಾತನಾಡುತ್ತಾ ಹೇಳಿದೆ, ಕರ್ನಾಟಕ ರಾಜ್ಯ ಕಳ್ಳರ ಹಾಗೂ ಸುಳ್ಳರ ಜೊತೆ ಶಾಮೀಲಾಗಿ ಅಕ್ಷರ ಪಾತ್ರ ಅಥವಾ ಅಕ್ಷರ ದಾಸೋಹ ಸ್ಕೀಮ್‌ನ್ನು ಬೇಕಾಬಿಟ್ಟಿಯಾಗಿ ಮಾಡಿಕೊಂಡು ಹೋಗಿ ಸಾವಿರಾರು ಜನರಿಗೆ ನಿರ್ವಸತಿ ಮಾಡಿ ಆ ಹೆಣ್ಣು ಮಕ್ಕಳೆಲ್ಲರೂ ನಿನ್ನೆ ದಿನ ಬಂದು ಬೆಂಗಳೂರಿನಲ್ಲಿ ಒಂದು ದೊಡ್ಡ ಸಭೆಯನ್ನು ಮಾಡಿ ಸುಮಾರು 6 ರಿಂದ 7 ಸಾವಿರ ಜನರು ಮುಂದೆ ಪ್ರದರ್ಶನವನ್ನು ಮಾಡಿದ್ದಾರೆ. ಅದಕ್ಕೆ ಸನ್ಮಾನ್ಯ ಮಂತ್ರಿಗಳೆಲ್ಲರೂ ಹೋಗಿ ಬಂದಿದ್ದಾರೆ. ಅಕ್ಷರ ದಾಸೋಹ ಕಾರ್ಯಕ್ರಮವನ್ನು ನೀವೇನು privatize ಮಾಡುವುದಕ್ಕೆ ಹೊರಟಿದ್ದೀರಿ, ಇದರಿಂದ ಇಡೀ ರಾಜ್ಯದಲ್ಲಿ ಏನು ಮಕ್ಕಳಿಗೆ ಊಟ ಮಾಡುವ ಕಡೆಗಳಲ್ಲಿ ಅಡಿಗೆಯನ್ನು ಮಾಡುವವರು, ಸಹಾಯಕರು, ಮತ್ತೊಬ್ಬರು ಇರುತ್ತಿದ್ದರು, ಅವರೆಲ್ಲರಿಗೂ ಕೆಲಸ ಇಲ್ಲದ ಹಾಗೆ ಆಗುತ್ತಾರೆ. ಮತ್ತೆ ಅದನ್ನು ಯಾರಿಗೆ ಕೊಡುತ್ತೀರೆಂಬ ಬಗ್ಗೆ ಇಲ್ಲಿ ನಾವು ಚರ್ಚೆಯನ್ನು ಮಾಡಬೇಕಾಗುತ್ತದೆ.

ನಾನು ಮೂಲಭೂತವಾಗಿ ಇವತ್ತು ಬೆಳಿಗ್ಗೆ ಕೆಲವು ಪ್ರಶ್ನೆಗಳನ್ನು ಎತ್ತಿದ್ದೆ, ನೀವು ಯಾರಿಗೆ ಕೊಡುತ್ತಿದ್ದೀರಿ, ಮಧುಪಂಡಿತ್‌ದಾಸ್ ಎನ್ನುವ ವ್ಯಕ್ತಿಯನ್ನು ನೀವು ಆಯ್ಕೆ ಮಾಡಿಕೊಂಡು ಇಸ್ಕಾನ್ ಕೆಳಗಡೆ ಇವತ್ತು ನಾವು ಸುಮಾರು 2 ಲಕ್ಷ ಚಿಲ್ಲರೆ ಜನರಿಗೆ ಕರ್ನಾಟಕದಲ್ಲಿ ಅಕ್ಷರ ದಾಸೋಹ ಕಾರ್ಯ ಯೋಜನೆಯನ್ನು ಪುನಃ ಅವರಿಗೆ ನಾವು ವಹಿಸಿಕೊಟ್ಟಿದ್ದೇವೆ. ಬಹುಶಃ ಈ ದೊಡ್ಡ ಸ್ಕ್ಯಾಂಡಲ್‌ನಲ್ಲಿ ಸರ್ಕಾರ ಕೂಡ ಶಾಮೀಲಾಗಿದೆ. ಇದರಲ್ಲಿ ಎರಡು ಮಾತಿಲ್ಲ. ಏಕೆಂದರೆ, ಈ ಪ್ರಮಾಣದ ಅವ್ಯವಹಾರ ಕರ್ನಾಟಕದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ಆಗಿರುವಂತಹದ್ದು ಒಬ್ಬ ವ್ಯಕ್ತಿಯಿಂದ ನಡೆಯುವುದಕ್ಕಾಗುತ್ತಿರಲಿಲ್ಲ. ಈ ಬಗ್ಗೆ ನಾನು ಬಿಡಿಸಿ ಹೇಳಬೇಕಾಗಿದೆ. ಇವತ್ತು ಏನು ಇಸ್ಕಾನ್ ಇದೆ, ಆ ಇಸ್ಕಾನ್ ಬಗ್ಗೆ ಮೊದಲು ನಾನು ಎರಡು ಮಾತುಗಳನ್ನು ಹೇಳಬೇಕಾಗಿದೆ. ಚರ್ಚೆ ನಿಯಮ 69 ರ ಅಡಿಯಲ್ಲಿರುವುದರಿಂದ ಅದನ್ನು ಬಿಡಿಸಿ ಹೇಳುತ್ತಿದ್ದೇನೆ.

ISKCON India Organization ಬೇರೆ, ISKCON Karnataka ಎಂದು claim ಮಾಡಿರುವವರೇ ಬೇರೆ. ಅದರಲ್ಲಿ ISKCON Karnataka ಎಂದು ಈಗ ಯಜಮಾನಿಕೆ ಮಾಡುತ್ತಿರುವವರು ಬೇರೆ. ISKCON India ಏನಿದೆ, ಇಡೀ

ದೇಶದಲ್ಲಿ ಅನೇಕ ಸಂಸ್ಥೆಗಳನ್ನು ದೇವಸ್ಥಾನಗಳನ್ನು ಇಟ್ಟುಕೊಂಡು ಒಂದು Charitable Trust ಆಗಿದೆ. ಅವರ ಬಗ್ಗೆ ನಾನು ಕೆಟ್ಟ ಮಾತುಗಳನ್ನು ಈ ಸಭೆಯಲ್ಲಿ ಆಡುವುದಿಲ್ಲ. ಕೆಟ್ಟ ಸಿಗ್ನಲ್ ಹೋಗುವುದು ನನಗೂ ಕೂಡ ಇಷ್ಟವಿಲ್ಲ. ಆದರೆ ಮಧುಪಂಡಿತ್‌ದಾಸ್ ಎಂಬುವವರು ಯಾರು ಇದ್ದಾರೆ, ಆ ವ್ಯವಸ್ಥೆಯಿಂದ ಆಚೆಗೆ ಬಂದಿದ್ದಾರೆ. 2001 ನೇ ಇಸವಿಯಲ್ಲಿ ಅವರು ISKCON Karnataka ಎಂದು ಹೇಳಿ Income Tax ಮುಂದೆ rerutns ನ್ನು file ಮಾಡಿದ್ದಾರೆ. ಅವರು returns file ಮಾಡುವಾಗ Income Tax Department ನವರು ಅವರಿಗೆ ಹೇಳಿದ್ದಾರೆ." ನಿನಗೆ ನೂರಾರು ಕೋಟಿ ರೂಪಾಯಿಗಳ ಅಸೆಟ್ಸ್ ದಿಢೀರ ಎಂದು ಎಲ್ಲಿಂದ ಬಂತು" ಎಂದು ಕೇಳಿದ್ದಾರೆ. ಅವರು ನೂರಾರು ಕೋಟಿ ರೂಪಾಯಿಗಳ ಅಸೆಟ್ಸ್‌ನ್ನು ಪ್ರೂವ್ ಮಾಡುವ ಕಾಲದಲ್ಲಿ ISKCON India ದವರ ದೇವಸ್ಥಾನ ಅದರ ವರಮಾನ ಇದು ಎಂದು ಹೇಳುವಾಗ ನೀವು ಇದನ್ನು ಫೈಲ್ ಮಾಡುವುದಕ್ಕೆ ಅರ್ಹರಲ್ಲ. ಇದನ್ನು ISKCON Society of India ಏನಿದೆ ಅವರು ಬಾಂಬೆಯಲ್ಲಿ Place ಆಗಿದ್ದಾರೆ. ಅವರೇ ಇದನ್ನು ಫೈಲ್ ಮಾಡಬೇಕೆಂದು ಹೇಳಿ ವಾಪಸ್ಸು ಹಾಕಿ ಕೋರ್ಟ್‌ನಲ್ಲಿ ಕೇಸ್ ಹಾಕಿ, ಕೋರ್ಟ್‌ನಲ್ಲಿ ಇವತ್ತು ಒಂದು ಆದೇಶವಾಗಿದೆ, "ನೀವು ಇಸ್ಕಾನ್‌ಗೆ ಸಂಸ್ಥಾಪಕರಲ್ಲ, ಯಜಮಾನರಲ್ಲ" ಎಂದು.

(9:00 pm)

Interim Order ನಲ್ಲಿ ಅವರು ಆ ದೇವಸ್ಥಾನವನ್ನು ನೋಡಿಕೊಂಡು ಹೋಗಬಹುದು, ಪ್ರಸಾದವನ್ನು ತೆಗೆದುಕೊಂಡು ಹೋಗಿ ಹಂಚಲಿಕ್ಕೆ ನಿಮಗೆ ದುಡ್ಡು ಕೊಡಬಹುದು, 5.00 ಲಕ್ಷ ರೂ.ಗಳನ್ನು ಬಿಟ್ಟು ಬೇರೆ ಯಾವುದೇ ರೀತಿಯಲ್ಲಿ ನೀವು ಹಣವನ್ನು ಡ್ರಾ ಮಾಡಬಾರದು ಎಂದು ಹೇಳಿ ಅವರಿಗೆ ಆದೇಶವಾಗಿದೆ. ಸುಪ್ರೀಂಕೋರ್ಟ್ ಆದೇಶವಾಗಿ ಇವತ್ತು ಇವರು ಇಲ್ಲಿದ್ದಾರೆ. ಅಧ್ಯಕ್ಷರೇ, ಆದರೆ ಈ ಮಧ್ಯೆ ಅವರೇನು ಮಾಡಿದರು, ನಾನು ಇಸ್ಕಾನ್ ಎಂದು ಹೇಳಿದರೆ ಈ ಹಣವನ್ನೆಲ್ಲಾ ಬಳಸಲಿಕ್ಕಾಗುವುದಿಲ್ಲವೆಂದು ಹೇಳಿ ಎಂದು ಟ್ರಸ್ಟ್‌ಗಳಿಗೆ ಅವರೇ Managing Trustee ಆಗಿ, ಅವರು Co-brother ಅದಕ್ಕೆ next ಅಧಿಕಾರಿಯಾಗುವಂಥ ಟ್ರಸ್ಟಿ ಆಗಿ ಅವರ ಇನ್ನೊಬ್ಬ ನೆಂಟನಾಗಿ ಎಂಟು Identical Trust ಗಳನ್ನು ಇವತ್ತು ಅವರು ಕರ್ನಾಟಕದಲ್ಲಿ ರಿಜಿಸ್ಟರ್ ಮಾಡಿಕೊಂಡಿದ್ದಾರೆ.

ನಾನು ಬೆಳಿಗ್ಗೆ ಮಾತನಾಡುವಾಗ ಹೇಳಿದೆ, ತಿರುಪತಿಯನ್ನು ಬಿಟ್ಟರೆ, ಬಹಶಃ ಅತ್ಯಂತ ಹೆಚ್ಚು ಹಣ ಬರುತ್ತಿರುವುದು ಇವತ್ತು ಬೆಂಗಳೂರಿನ ಇಸ್ಕಾನ್ ಟೆಂಪಲ್‌ಗೆ. ಸ್ವಾಮಿ ಅಯಪ್ಪ ದೇವಸ್ಥಾನಕ್ಕೆ, ವೈಷ್ಣೋದೇವಿ ಟೆಂಪಲ್‌ಗೆ ಜಾಸ್ತಿ ಹಣ ಬರುತ್ತದೆ ಎಂದು ನಾವು ತಿಳಿದುಕೊಂಡಿದ್ದೆವು. ಬೆಂಗಳೂರಿನಲ್ಲಿರುವ ಇಸ್ಕಾನ್ ದೇವಸ್ಥಾನಕ್ಕೆ ತಿರುಪತಿಯ ನಂತರ ಹೆಚ್ಚು ಹಣ ಬರುತ್ತಿರುವ ಒಂದು ದೇವಸ್ಥಾನ ಮತ್ತು ಒಂದು ವ್ಯವಸ್ಥೆ. ಅಲ್ಲಿ ಬರುವ ಹಣವನ್ನೆಲ್ಲಾ ಇವತ್ತು ಬೇರೆ ತರಹದ ಟ್ರಸ್ಟ್‌ಗಳಿಗೆ ಸೈಫನ್ ಮಾಡಿ ಇವತ್ತು ಸುಪ್ರೀಂ ಕೋರ್ಟ್ ಮುಂದೆ Contempt of Court proceedings ನಡೆಯುತ್ತಿದೆ. ನೀವು ಈ ತರಹ ಅನ್ಯಾಯ ಮಾಡಿದ್ದೀರಿ, ಕೋರ್ಟ್ ಆದೇಶವನ್ನು ಮೀರಿ ಈ ಹಣವನ್ನೆಲ್ಲಾ ಬೇರೆ ಕಡೆಗೆ ಸೈಫನ್ ಮಾಡುತ್ತಿದ್ದೀರಿ, ಡೈವರ್ಟ್ ಮಾಡುತ್ತಿದ್ದೀರಿ ಎಂದು.

ಈ ಮನುಷ್ಯ ಏನು ಮಾಡಿದ್ದಾರೆ ಅಧ್ಯಕ್ಷರೆ, ಇವರಿಗೆ ಅನ್ನಿಸಿತು, ನಾನು ಏನಾದರೂ ಒಂದು ಒಳ್ಳೆಯ ಕೆಲಸವನ್ನು ಮಾಡಬೇಕೆಂದು. ಇಸ್ಕಾನ್ ಹೆಸರಿನಲ್ಲಿ ಅಕ್ಷಯ ಪಾತ್ರೆ ಎಂಬ ಒಂದು contract ಅನ್ನು ರಾಜ್ಯಸರ್ಕಾರದಿಂದ ತೆಗೆದುಕೊಂಡರು, he is not empowered to take the name of ISKCON under the decision of the Supreme Court, ಸುಪ್ರೀಂಕೋರ್ಟ್ ಇಲ್ಲಿಂದ ಮುಂದೆ ನೀವು ಯಾವುದೇ ಹೊಸ ವ್ಯವಹಾರ ಮಾಡಕೂಡದು, ಇಲ್ಲಿಂದ ಮುಂದಕ್ಕೆ ಇಸ್ಕಾನ್ ಹೆಸರನ್ನು ಬಳಸಕೂಡದು, day to day affairs ಅನ್ನು ನೋಡಿಕೊಂಡು ಹೋಗಬೇಕೆಂದಾಗ 5.00 ಲಕ್ಷ ರೂ.ಗಳನ್ನು ನಿಮಗೆ ಡ್ರಾ ಮಾಡಲಿಕ್ಕೆ ಮಾತ್ರ ನಾವು permit ಮಾಡುತ್ತೇವೆಂದು ಹೇಳಿದರು, ಇಸ್ಕಾನ್ ಹೆಸರಿನಲ್ಲಿ ಅಕ್ಷಯ ಪಾತ್ರೆಯನ್ನು ಈ ಕರ್ನಾಟಕದಲ್ಲಿ ಮಧ್ಯಾಹ್ನ ಮಕ್ಕಳಿಗೆ ಊಟ ಒದಗಿಸುವ ಸ್ಕೀಮ್‌ಅನ್ನು ನಮಗೆ ವಹಿಸಿಕೊಡಿ ಎಂದು ಹೇಳಿ ಇವರು contract ಗೆ enter ಆದರು. ಇವತ್ತಿನವರೆಗೆ ಎಲ್ಲಿಯೂ ಅವರು ಕರ್ನಾಟಕ ರಾಜ್ಯದ ಕಾರ್ಯಕ್ರಮವನ್ನು ನಾನು ಅನುಷ್ಠಾನ ಮಾಡುತ್ತಿರುವ ಎನ್.ಜಿ.ಓ ಎಂದು ಹೇಳಲೇ ಇಲ್ಲ.

He is an implementing N.G.O. ಅದಮ್ಯ ಎನ್ನುವಂಥ ಇನ್ನೊಂದು N.G.O. ಏನಿದೆ, ಬೆಂಗಳೂರಿನಲ್ಲೇ ಅವರು ಮಾಡುತ್ತಿದ್ದಾರೆ. ಇವರು, ಅವರು ಒಟ್ಟಿಗೆ ಮಾಡಿಕೊಂಡು ಹೋಗುತ್ತಿದ್ದರು. ಇವತ್ತು ಇವರು implementing N.G.O. ಇದ್ದವರು ಏನು ಮಾಡಿದರು, ಎಲ್ಲಾ ಕಡೆ brochures ಹಂಚಿದರು.

advertisement ಅನ್ನು ಕೊಟ್ಟರು. U.S.A. ನಲ್ಲಿ ಒಂದು Office open ಮಾಡಿದರು. ಅಲ್ಲೊಬ್ಬ lady ಅನ್ನು ಈ ಕಾರ್ಯಕ್ರಮಕ್ಕೋಸ್ಕರವೇ appoint ಮಾಡಿದರು. ಅವೆಲ್ಲಾ ಮಾಹಿತಿಯನ್ನು ನಾನು ನಿಮಗೆ ಕಳುಹಿಸಿ ಕೊಡುತ್ತೇನೆ. ಅವರಿಗೆ ಈ fund raise ಮಾಡುವುದೇ ಉದ್ಯೋಗ. ಇಂಡಿಯಾ ದೇಶದ ಮಕ್ಕಳು ಅವರ ಬಡತನ, ಅವರ ದರಿದ್ರಾವಸ್ಥೆ ಅವರ ಕಣ್ಣಲ್ಲಿ ನೀರು, ಅವರು ಇಟ್ಟಿಗೆ ಹೊರುವುದು, ಅವರು ಬಿದ್ದುಹೋಗುತ್ತಿರುವ ಗುಡಿಸಲುಗಳನ್ನು ಕಟ್ಟಿ ನಿಲ್ಲಿಸಿಕೊಂಡಿರುವ ಚಿತ್ರ, ಗುದ್ದಲಿ ತೆಗೆದುಕೊಂಡು ಮಣ್ಣು ಹೊರುವುದು. ಇದನ್ನು internet ನಲ್ಲಿ ಹಾಕುವುದು, ಇವತ್ತು ನಾನು ನಂಬರ್ ಕೊಡುತ್ತೇನೆ, ಯಾರಾದರೂ download ಮಾಡಿಕೊಂಡು ನೋಡಬಹುದು.

ಇಡೀ ಇಂಡಿಯಾ ದೇಶದ ಮಕ್ಕಳು ಇವತ್ತು ಬದುಕುವ ಸ್ಥಿತಿಯಲ್ಲಿಲ್ಲ, ಇಡೀ ಇಂಡಿಯಾ ದೇಶದ ಮಕ್ಕಳು ದರಿದ್ರ ಸ್ಥಿತಿಯಲ್ಲಿದ್ದಾರೆ, ನಿಮ್ಮ ಹತ್ತಿರ ಹಣ ಇದೆ, ನಮಗೆ ದಾನ ಕೊಡಿ ಎಂದು ಹೇಳಿ, per child 250 ಡಾಲರ್ sponsor ಮಾಡಿ ಎಂದು ಅಮೇರಿಕಾದಲ್ಲಿ ಜಾಹೀರಾತನ್ನು ಕೊಟ್ಟರು. ಇಂಡಿಯಾದಲ್ಲಿ ಮಾಡುವವರು 1200-00 ರೂ.ಗಳನ್ನು ಕೊಟ್ಟರೆ ಒಂದು ಮಗುವಿಗೆ ಊಟಕ್ಕೆ ಹಾಕುತ್ತೇವೆಂದು ಹೇಳಿ ಜಾಹೀರಾತು ಮಾಡಿದರು. ಇವರ ಜೊತೆಗೆ M.N.C. ಗಳು, ಕಂಪೆನಿಗಳು, ಬ್ಯಾಂಕ್‌ಗಳು, ಇವರೆಲ್ಲರಿಂದಲೂ ಚಾರಿಟಿಯನ್ನು ಕಲೆಕ್ಟ್ ಮಾಡಿದರು. ಇನ್ಫೋಸಿಸ್‌ನ ನಾರಾಯಣಮೂರ್ತಿಯವರು ಕರ್ನಾಟಕದಲ್ಲಿ 50.00 ಲಕ್ಷ ರೂ.ಗಳನ್ನು donate ಮಾಡಿದ್ದಾರೆ. ರಾಜಸ್ಥಾನದಲ್ಲಿ 1.00 ಕೋಟಿ ರೂ.ಗಳನ್ನು donate ಮಾಡಿದ್ದಾರೆ. ಸುಧಾ ನಾರಾಯಣಮೂರ್ತಿಯವರು, ನಮ್ಮ ಎಂ.ಎಂ.ಎಲ್.- Mysore Minerals limited of Karnataka 70.00 ಲಕ್ಷ ರೂ.ಗಳನ್ನು in front of our Chief Minister, ಇವರಿಗೆ ಚೆಕ್ ಕೊಟ್ಟಿದ್ದಾರೆ.

M.M.L. ನಂಥ ಒಂದು ಸಾರ್ವಜನಿಕ ಸಂಸ್ಥೆ ಯಾರ್‍ಯಾರಿಗೆ, ಯಾವ ದುಡ್ಡಿನಲ್ಲಿ ಚಾರಿಟಿ ಕೊಡುತ್ತಿದೆ, ಹೇಗೆ ಕೊಡುತ್ತಿದೆ? ಈ ಡೊನೇಷನ್ ಕೊಡಲಿಕ್ಕೆ ಇವರ ಹತ್ತಿರ ಯಾವ ಹಣ ಇತ್ತು? ನಮಗೆ ಅರ್ಥವಾಗಿಲ್ಲ. A.D.B ಯವರು ಹಣ ಕೊಟ್ಟಿದ್ದಾರೆ, ಸಿಂಡಿಕೇಟ್ ಬ್ಯಾಂಕ್ ಹಣ ಕೊಟ್ಟಿದೆ, ಕೆನರಾ ಬ್ಯಾಂಕ್ ಹಣವನ್ನು ಕೊಟ್ಟಿದೆ. ಯಾವ್ಯಾವ ಸಾರ್ವಜನಿಕ ಸಂಸ್ಥೆಗಳು ದುಡ್ಡು ಕೊಡುತ್ತದೆಯೋ ಆ ಎಲ್ಲಾ ಸಂಸ್ಥೆಗಳಿಂದ ಚಾರಿಟಿಯನ್ನು ಕಲೆಕ್ಟ್ ಮಾಡಿದರು. ಒಂದು format ಅನ್ನು, ನಾನು ತಮಗೆ ಕೊಟ್ಟಿದ್ದೇನೆ, ಅದನ್ನು ಪ್ರಿಂಟ್ ಮಾಡಿ ಹಂಚಿಸಿಬಿಟ್ಟು ಬಡವರ ಮಕ್ಕಳು

ಭಿಕ್ಷುಕರ ಮಕ್ಕಳಂತೆ ಮಾಡಿ ಈ format ಅನ್ನು ನೀವು click ಮಾಡಿಬಿಡಿ, ಇಷ್ಟನ್ನು ನಿಮ್ಮ ಕ್ರೆಡಿಟ್ ಕಾರ್ಡ್‌ನಲ್ಲಿ ಅಥವಾ ನಿಮ್ಮ ಅಕೌಂಟ್‌ನಲ್ಲಿ ನಮಗೆ ಟ್ರಾನ್ಸ್‌ಫರ್ ಮಾಡಿಕೊಟ್ಟುಬಿಟ್ಟರೆ, ನಾವಿಷ್ಟನ್ನು ನಿಮ್ಮ ಮಕ್ಕಳಿಗೆ ಪುಣ್ಯದ ಕೆಲಸಕ್ಕೆ ಬಳಸುತ್ತೇವೆಂದು ಹೇಳಿದರು. ನಮ್ಮ ಪ್ರಶ್ನೆ ಏನೆಂದರೆ, ಇವತ್ತು ಈ ದುಡ್ಡನ್ನು ಅವರು ಏನು ಮಾಡಿದರು? ಈ ದುಡ್ಡನ್ನು ಇವತ್ತು ಇಸ್ಕಾನ್ ಎಂದು ಹೇಳಿಕೊಳ್ಳುತ್ತಿರುವಂಥ ಮೋಹನ್ ಪಂಡಿತ್ ದಾಸ್ ಅವರು commercial activities ಗೆ ನಮ್ಮದೇ ಬೆಂಗಳೂರಿನಲ್ಲಿ ಉಪಯೋಗವನ್ನು ಮಾಡುತ್ತಿದ್ದಾರೆ.

ಇವರು Real Estate ನಲ್ಲಿ ಇವತ್ತು direct ಆಗಿ involve ಆಗಿಬಿಟ್ಟಿದ್ದಾರೆ. ಇವರಿಗೆ ಬೇಕಾದಷ್ಟು ಲ್ಯಾಂಡ್ ಅನ್ನು ನಮ್ಮ industries department ನವರು KIADB ಕಡೆಯಿಂದ ಮಂಜೂರು ಮಾಡಿರುವ ದಾಖಲೆಗಳು ನಮ್ಮ ಹತ್ತಿರ ಇವೆ. ಆ ದಾಖಲೆಗಳನ್ನು ಕೂಡ ಇವತ್ತು ತಿರುಚಿಬಿಟ್ಟು change of purpose ಮಾಡಿಕೊಂಡು ಇಡೀ ಹಣವನ್ನು ಇವತ್ತು ಕಮರ್ಷಿಯಲ್ ಆಗಿ ಮಾಡಿಕೊಂಡು ನನ್ನ ಅಂದಾಜಿನಲ್ಲಿ ಅಧ್ಯಕ್ಷರೆ, ಸುಮಾರು 2,000/- ಕೋಟಿ ರೂ.ಗಳಷ್ಟು ಆಸ್ತಿಯನ್ನು ಇವತ್ತು ಬೆಂಗಳೂರಿನಲ್ಲಿ ಮಾಡಿದ್ದಾರೆ. 2,000/- ಕೋಟಿ ರೂ.ಗಳು ನಾನು ಹೇಳುತ್ತೇನೆ, "Survey No. 55 of Vasanthpura, 25 acres. Gunduthopu of Vasanthpura Village, one acre 23 guntas. Survey No. 62 (1b) of Gubbala village, 4 acres. Survey No. 62 (c) of Gubbala village, 2 acres. Survey No. 49 of Doddakallasandra village, 50ft." ಇವತ್ತು ಕೆ.ಆರ್. ರಸ್ತೆಯಲ್ಲಿ, ಕನಕಪುರ ರಸ್ತೆಯಲ್ಲಿ ಏನಾಗಿದೆಯೆಂದರೆ ಇವರಿಗೆ ವ್ಯಾಪಕವಾಗಿ ಜಮೀನನ್ನು ಕೊಡಲಾಗಿದೆ. ಇವರು ಇವತ್ತು ರಿಯಲ್ ಎಸ್ಟೇಟ್‌ನಲ್ಲಿ ನಂಬರ್ 1 ಆಗಿದ್ದಾರೆ.

ನಾನು ತಮಗೆ photographs ಕೂಡ ಕೊಟ್ಟಿದ್ದೇನೆ. ಎರಡು ಕಡೆ ಇವತ್ತು ಇವರು Shopping Complex ಅನ್ನು ಮಾಡಿದ್ದಾರೆ. Shopping Complex ಒಂದರಲ್ಲಿ ಒಂದು ಸುಮಾರು 1,100 ಮನೆಗಳೂ, ನೋಡಿ ಈ ಫೋಟೊಗಳನ್ನು ನಿಮಗೆ ತೋರಿಸುತ್ತಿದ್ದೇನೆ. This is the apartment he has built the name of Lord Krishna. This is a Commercial apartment. ಇದು ಎಲ್ಲಿಯವರೆಗೆ ಹೋಗಿದೆ? ಇವರಿಗೆ ಕೆನರಾ ಬ್ಯಾಂಕ್‌ನವರು scheme ಕೊಡುತ್ತಾರೆ. ಯಾರಾದರೂ ಈ ಗೋಕುಲಂ ಅಪಾರ್ಟ್‌ಮೆಂಟ್‌ನಲ್ಲಿ

ಅಥವಾ ಇವರ ಅಪಾರ್ಟ್‌ಮೆಂಟ್‌ನಲ್ಲಿ ಸಾಲ ತೆಗೆದುಕೊಳ್ಳುತ್ತೇವೆಂದರೆ ನಾನು special scheme ಅನ್ನು ಕೊಡುತ್ತೇನೆ. 7.50% ಬಡಿಗೆ ಸಾಲ ಕೊಡುತ್ತೇನೆ. ಇದಕ್ಕೆ ಸಂಬಂಧಪಟ್ಟ ಪ್ರತಿಗಳೆಲ್ಲಾ ನನ್ನ ಹತ್ತಿರ ಇದೆ. ಕೆನರಾ ಬ್ಯಾಂಕ್‌ನವರು ಕೂಡ ಅವರಿಗೆ concession ಕೊಡುತ್ತಾರೆ ಇಲ್ಲಿ ಹೋಗಿ ದುಡ್ಡು ತೆಗೆದುಕೊಳ್ಳಲಿಕ್ಕೆ.

ಇದನ್ನು ಮಾಡಿ ಇವತ್ತು ಬೇಕಾದಷ್ಟು ಲ್ಯಾಂಡ್ ಅನ್ನು ಬೆಂಗಳೂರಿನಲ್ಲಿ ಇವರು occupy ಮಾಡಿಕೊಂಡು ಬಿಟ್ಟಿದ್ದಾರೆ. ಇವರ ಉದ್ದೇಶ ಏನು? ನೋಡಿ ಇವತ್ತು ಅವರು ಮಾಡುವಂಥಾದ್ದು, ಕೆನರಾ ಬ್ಯಾಂಕ್‌ನವರು ಅವರಿಗೆ ಕೊಟ್ಟಿರುವ concession ಬಗ್ಗೆ ಓದುತ್ತೇನೆ. "Special Housing loan scheme for purchase of flats at Gokulam, a project of M/s India Heritage Trust, a unit of M/s ISKCON, Bangalore." ಇವರಿಗೆಂದೇ ಕೆನರಾ ಬ್ಯಾಂಕ್ ಸ್ಪೆಷನ್ ಪ್ಯಾಕೇಜ್ ಮಾಡಿಕೊಡುತ್ತಿದೆ. ಇವರ ಹತ್ತಿರ ಯಾರಾದರೂ flat ತೆಗೆದುಕೊಳ್ಳಲಿಕ್ಕೆ ಸಾಲ ಮಾಡುವುದಾದರೆ ಅವರಿಗೆ ಏನೇನು ಮಾಡುತ್ತೇವೆ ಎಂದು.

"We are happy to inform that our head office has permitted the following relaxations in our Housing loan scheme for purchase of flats at Gokulam.

1) Rate of interest : 7.25%
2) Repayment Holidays : Up to 24 months for both principle and interest.
3) Age : Repayment period can be permitted up to 20 years or 70 years of age, which ever is earlier.
4) Quantum : 60 months. 5 years gross salary income. Net take home salary, which should have been 50 %. that is 25% after deduction of E.M.I. or the proposed loan."

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) :- ಅಧ್ಯಕ್ಷರೆ, ಮಾಧುಸ್ವಾಮಿಯವರು ಸದನದ ಹಿರಿಯ ಸದಸ್ಯರಿದ್ದಾರೆ, ಅವರು ಯಾವುದೇ

ಒಂದು ವಿಷಯದ ಬಗ್ಗೆ ಸರಿಯಾದ ರೀತಿಯಲ್ಲಿ ಅಧ್ಯಯನ ಮಾಡಿಕೊಂಡು ಬರುತ್ತಾರೆ. ಆಗಲೇ ಕೂಡ 25 ನಿಮಿಷಗಳಿಂದ ಮಾತನಾಡಿದ್ದಾರೆ. ಬಹಳಷ್ಟು ವಿಷಯಗಳು ಕೂಡ ಇಲ್ಲಿ ಹೇಳತಕ್ಕಂಥದ್ದು ಇದೆ. ಇವತ್ತು ಸದನದಲ್ಲಿ ಯಾರೂ ಉತ್ತರ ಕೊಡಲಿಕ್ಕೆ ಇಲ್ಲ. ನೀವು ಅವರಿಗೆ ಏತಕ್ಕೆ directions ಕೊಡುತ್ತಿಲ್ಲ? ಇಲ್ಲವಾದರೆ ಸದನ ನಡೆಸಬೇಡಿ, ಮನೆಗೆ ಹೋಗೋಣ, ಸದನ ನಡೆಯಬೇಕಾದುದು ಕೇವಲ ಔಪಚಾರಿಕವಾಗಿ ಅಲ್ಲ. It is a very important matter. ಪಾಪ ಎಷ್ಟು ಮುಖ್ಯವಾದ ವಿಷಯಗಳನ್ನು ಸರಿಯಾದ ರೀತಿಯಲ್ಲಿ ಇವತ್ತಿನ ದಿವಸ ಹೇಳುತ್ತಿದ್ದಾರೆ. ಯಾರೂ Home Minister ಇಲ್ಲ, Revenue Minister ಇಲ್ಲ, Chief Minister ಬಂದಿಲ್ಲ.

ಅಧ್ಯಕ್ಷರು :- ಒಂದು ನಿಮಿಷದಲ್ಲಿ ಗೃಹ ಸಚಿವರು ಬರುತ್ತಾರೆ, ಹೇಳಿ ಕಳೂಹಿಸಿದ್ದೇನೆ.

ಶ್ರೀ ಎನ್. ಧರ್ಮಸಿಂಗ್ :- ಯಾವಾಗ ಬರುತ್ತಾರೆ? ಅವರು ಹೇಳಬೇಕಾದರೆ, he has to take all the particulars. ಈ ರೀತಿ ಸದನ ನಡೆಸಿದರೆ ಹೇಗೆ? ಈಗ ನಮಗೂ ತೊಂದರೆ, ನಿಮಗೆ ತೊಂದರೆಯೇ ಇಲ್ಲವೋ ಗೊತ್ತಿಲ್ಲ. ಪ್ರೆಸ್‌ನವರಿಗೆ ತೊಂದರೆ, ಮಾಧುಸ್ವಾಮಿಯವರು ಮಾತನಾಡುತ್ತಾರೆಂದು ನಾವಿಲ್ಲಿ ಬಂದಿದ್ದೇವೆ. ಹೇಳುತ್ತಿದ್ದಾರೆ, ಏನು ಈ ತರಹ ನೀವು ಸದನವನ್ನು ನಡೆಸಿದರೆ ಹೇಗೆ?

ಅಧ್ಯಕ್ಷರು :- ಗೃಹ ಸಚಿವರಿಗೆ ಹೇಳಿಕಳುಹಿಸಿದ್ದೇನೆ, ಕೌನ್ಸಿಲಿಂಗ್‌ಗೆ ಹೋಗಿದ್ದಾರೆ, ಅವರು ಬರುತ್ತಾರೆ. ಮಂತ್ರಿಗಳಿದ್ದಾರಲ್ಲ.

ಶ್ರೀ ಎನ್. ಧರ್ಮಸಿಂಗ್ :- ಯಾವ ಮಂತ್ರಿಗಳು? Concerned Minister ಇರಬೇಕಲ್ಲವೇ? This is very important, He raised has serious matter. ಯಾರು competent ಇದ್ದಾರೆ? ಸರ್ಕಾರದ ಪರ ಉತ್ತರ ಕೊಡಲಿಕ್ಕೆ. ಉತ್ತರ ಕೊಡಬೇಕಲ್ಲ ಈಗ.

ಅಧ್ಯಕ್ಷರು :- ಹೇಳಿ ಕಳುಹಿಸಿದ್ದೇನೆ, ಬರುತ್ತಾರೆ. ಅವರು ಉತ್ತರ ಕೊಡುತ್ತಾರೆ.

ಶ್ರೀ ಗೋವಿಂದ ಎಂ. ಕಾರಜೋಳ್ (ಆಹಾರ ಮತ್ತು ನಾಗರಿಕ ಸಚಿವರು) :- ಅವರು ಏನು ಚರ್ಚೆ ಮಾಡುತ್ತಾರೆ, ಮಾಡಲಿ ನಾವು ಉತ್ತರ ಕೊಡುತ್ತೇವೆ. ಉತ್ತರ ಕೊಡಲಾರದಂಥ ವಿಷಯ ಏನು ಇದೆ ಅದರಲ್ಲಿ. ಚರ್ಚೆ ಮಾಡಿ, ನಾವಿದ್ದೇವೆ.

ಶ್ರೀ ಶಿವಾನಂದ ಪಾಟೀಲ್ :- ಉತ್ತರ ಯಾರು ಕೊಡುತ್ತಾರೆ? ಇದು Revenue and Home Minister ಗೆ concerned ವಿಷಯವಾಗಿದೆ. ಉತ್ತರ ತಾವು ಕೊಡುವುದಾಗಿ Food Minister ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎನ್. ಚೆಲುವರಾಯಸ್ವಾಮಿ (ಸಾರಿಗೆ ಸಚಿವರು) :- Revenue Minister ರವರಿಗೆ ಆ ಮನೆಯಲ್ಲಿ ಬಿಲ್ ಇದೆಯೆಂದು ತಮಗೆ ಗೊತ್ತಿದ್ದೂ ಹೀಗೆ ಮಾತನಾಡಿದರೆ ನಾವೇನು ಹೇಳುವುದು? ತಾವು senior member ಏನೂ ಮಾಡಲಿಕ್ಕಾಗುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಇಲ್ಲ, ನಾನು ಬೇಡವೆಂದು ಹೋಗುತ್ತಿದ್ದೆ, ಶಿವಾನಂದ ಪಾಟೀಲರ್‌ರವರೇ ನನ್ನನ್ನು ಕರೆದುಕೊಂಡು ಬಂದು ಹೇಳೋದನ್ನು ಹೇಳಿಬಿಡಿ, ನಾವ್ಯಾಕೆ ತಪ್ಪಿತಸ್ಥರಾಗಬೇಕು ಎಂದು ಹೇಳಿದವರೇ ಅವರು, ಈಗ ಹೀಗೆ ಹೇಳುತ್ತಾರೆ. It is a fact. Raise ಮಾಡಿ ಹಾಗೆ ಹೋಗುವುದು ತಪ್ಪಾಗುತ್ತದೆ, ಬಂದುಬಿಡಿ ಎಂದರು. ನಾನು ಆವತ್ತು ಒಂದು ಸಾರಿ ಹೇಳಿದೆ,

" In the Supreme Court of India. It is necessary to protect the interest of the dependent Appellants, ಅಂದರೆ ಇಸ್ಕಾನ್. We therefore direct that the plaintiff respondents ISKCON, Karnatala here in shall not alienate or part with movable propert mentioned in Schedule-B properties excluding free meal and prasadam, immovable property are paid to any third party right in the same. The plaintiff respodent shall however carry on their religious and other charitable activities and incur expenditure, which are essential, if any other major expenditure in connection with distribution of prasadam."

ಇಷ್ಟು ಬಿಟ್ಟರೆ ಇನ್ನಾವುದನ್ನು ಅವರು ಮಾಡಬಾರದು ಎಂದು ಹೇಳಿದ್ದಾರೆ. ಈಗ ನಮ್ಮ ವಾದ ಏನೆಂದರೆ ಇಸ್ಕಾನ್‌ರವರು ಇಲ್ಲೇನು contract ತೆಗೆದುಕೊಂಡರು, it is unethical. ಏಕೆಂದರೆ ಅವರು ಇಲ್ಲಿ contract ತೆಗೆದುಕೊಳ್ಳಲಿಕ್ಕೆ

ಸಮರ್ಥರಿರಲಿಲ್ಲ. ನಮ್ಮ ಸರ್ಕಾರ ಅವರಿಗೆ ಅದನ್ನು ಕೊಡಬಾರದಾಗಿತ್ತು. This is aclear instance of deceitful and deliberate suppression of information, mis-representation and overstating inflating costs. ಇವರೇನು ಮಾಡಿದರೆಂದರೆ 6.00/– ಅನ್ನು ಒಂದು ಮಗುವಿಗೆ ಕೊಡಬೇಕಾಗಿದೆ. ಆರು ರೂಪಾಯಿ ಒಂದು ಮಗುವಿಗೆ ಖರ್ಚಾಗಿದೆ ಎಂದು ಹೇಳಿದ್ದಾರೆ. ನಾನು ಬೆಳಿಗ್ಗೆ ಹೇಳಿದೆ, ಏಕೆ ಇವತ್ತೇ ರೈಸ್ ಮಾಡಬೇಕೆಂದರೆ ನಿನ್ನೆ ಆರೇಳು ಸಾವಿರ ಹೆಣ್ಣುಮಕ್ಕಳು ಮಾಡಿದ್ದೊಂದು ಧರಣೀ ಬೆಂಗಳೂರಿನಲ್ಲಿ, ಇನ್ನೊಂದು ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಆರು ರೂಪಾಯಿ ಒಂದು ಮಗುವಿಗೆ ಕೊಡುತ್ತಿದ್ದರು. That amounts to Rs. 200 crore. ಬೆಂಗಳೂರು ಮಹಾನಗರ ಪಾಲಿಕೆಯ ಬಜೆಟ್ಟಿನಲ್ಲಿ ಈ ಕಾರ್ಯಕ್ರಮಕ್ಕೆ 200 ಕೋಟಿ ರೂ.ಗಳನ್ನು ಇಡಲಾಗಿದೆ. 31 ನೇ ಮಾರ್ಚ್‌ಗೆ ಅವರದೇನು terminate ಆಗಿದೆ, ಅದನ್ನು ಈಗ ಅವರು renewal ಮಾಡಬೇಕೆಂದು ಕೇಳಿದ್ದಾರೆ.

ನಮ್ಮ ಮುಂದೆ ಈಗೇನಿರುವುದೆಂದರೆ, ಈಗ ಅವರು ಯಾವುದೇ ರೀತಿಯಲ್ಲಿ ಸರ್ಕಾರದ ಹೆಸರಾಗಲಿ, ಕೇಂದ್ರ ಸರ್ಕಾರದ ಹೆಸರಾಗಲಿ, ರಾಜ್ಯ ಸರ್ಕಾರದ ಹೆಸರಾಗಲಿ ಬಳಸದೇ ಇವತ್ತು ನಾನು ಇಷ್ಟೂ ಖರ್ಚು ಮಾಡುತ್ತೇನೆಂದು ಹೇಳಿ ಅವರು ಇವತ್ತು ನಮ್ಮನ್ನು ಮೋಸ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿರುವ ಅವರ ಆಸ್ತಿಯನ್ನು ನಾನು ಇನ್ನೊಂದು ಸಲ ಹೇಳುತ್ತೇನೆ.

"100 acres International quality premium township project, less than 5 minutes from the new Bangalore International Airport. 625 premium luxury flats projects, less than 5 k.ms. from Metro of K.R. Road, 1100 premium luxury flats on the K.R.Road. Shopping malls, complexes, commercial complexes, a spot of the Gokulam project on K.R. Road near Metro. I.T. Park, B.P.O Park, helipads, Five Star Hotel complex, International conventions centre at Vasanthpura, Disneyland type of amusement and enterainment park over Vasanthpura, Commercial complexes, delux luxury flats over

100 acres township in Brindavan, New Delhi. Deisneyland type of amusement and entertainment park in Brindavan, near New Delhi. A largest five star hotel with medical tourism and a beach resort for Western tourists and tourists for Middle-East near the world famous Kauvalum beach resorts in Kerala.

Acquired a large beach resort club and entertainment hall on the beach in Adiyar, Chennai, i.e. being hired parties, events, and shootings. A massive township, luxury flats and commercial complexes projects on the ring road in Jaipr, Rajasthan, and they have approached HUDCO for Rs. 400 crore for funding this projects. Projects in Thirupati, projects in Mysore, projects in puri Jagannath etc, The combined commercial value of projects mentioned here are in excess of Rs. 2000 Crores. The top trustee of A.P.F travel to all major cities of the world numerous time in year on the pretext of raising funds for the poor, hungry students of the Indian Schools. No body knows just how much is raised and what happens to the donations raised. there is no transparency, accountability or audit of such funds."

ನಮ್ಮ ವಾದ ಏನೆಂದರೆ, ನಮಗೆಷ್ಟು ಹಣ ಬಂತು? ಏನಾಯಿತು, ಯಾರ್‍ಯಾರು ದುಡ್ಡು ಕೊಟ್ಟರು, ಎಷ್ಟನ್ನು ನೀವು ಬಳಸಿದಿರಿ? ಎಷ್ಟನ್ನು ಬಳಸಲಿಲ್ಲ? ಇವತ್ತಿನವರೆಗೆ ಅವರು ಯಾರಿಗೂ ಲೆಕ್ಕ ಕೊಡಲಿಲ್ಲ. ಅವರಿಗೆ ಇದು ಒಂದು ವರವಾಯಿತು. Income Tax ನವರು ನೀವು ಫೈಲ್ ಮಾಡಬೇಡಿ, ನೀವು ಇಸ್ಕಾನ್ ಕರ್ನಾಟಕಕ್ಕೆ ಸಂಬಂಧಪಟ್ಟವರು ಎಂದು ಹೇಳಿದ್ದಕ್ಕೆ ಅದನ್ನೇ ಒಂದು ಯಶಸ್ಸು ತೆಗೆದುಕೊಂಡು ಬಿಟ್ಟು ಈಗ Income Tax ಕೊಡುತ್ತಿಲ್ಲ, ತಮಗೆ ಏನು ಬರುತ್ತಿದೆ ಹೇಳುತ್ತಿಲ್ಲ. Section 35 ರ ಕೆಳಗೆ they are exempted by 100% of tax from Government of India. Section 80 (g) ಆಗಿದ್ದರೆ 50% ಆಗಿರುವುದು. Section 35 ನಲ್ಲಿ ನೂರಕ್ಕೆ ನೂರು ಪರ್ಸೆಂಟ್‌ನಷ್ಟು tax exemption ತೆಗೆದುಕೊಂಡಿರುವ ಒಂದು ಸಂಸ್ಥೆ ಬಹುಶಃ ಸಿದ್ಧಗಂಗಾ ಸ್ವಾಮಿಗಳಿಗಿಲ್ಲ, 80 (g)

ನಲ್ಲೇ ಇಲ್ಲ. ನಾವ್ಯಾರಾದರೂ 80 (g) ನಲ್ಲಿ exemption ಇದೆ, ದಾನ ಮಾಡುತ್ತೇವೆಂದರೆ ಸಾಯಿಬಾಬಾ ಅವರ ಹತ್ತಿರ ಕಳುಹಿಸಬೇಕು ಹಳೆ ಮೈಸೂರಿನಲ್ಲಿ. ಸಿದ್ಧಗಂಗಾ ಮಠಕ್ಕಿಲ್ಲ, ತಿರುಪತಿಗಿಲ್ಲ, ಚುಂಚನಗಿರಿ ಮಠಕ್ಕಿಲ್ಲ, ಯಾವ ಚಾರಿಟಿ ಮಾಡುವವರಿಗೂ ಸಿಗದಂಥ concession ಈ ಮನುಷ್ಯನಿಗೆ ಇವತ್ತು ಸರ್ಕಾರದ ಮಟ್ಟದಲ್ಲಿ ಸಿಕ್ಕಿದೆ. ಹಾಗಾಗಿ ಇವತ್ತು ಒಂದೇ ಒಂದು ರೂಪಾಯಿ ಖರ್ಚಾಗಿಲ್ಲ.

ನಾವು ಗ್ರಾಮೀಣ ಪ್ರದೇಶದಲ್ಲಿ ಏನು ಮಾಡುತ್ತೇವೆ. ನಾವೀಗ ಅಕ್ಷರ ದಾಸೋಹದಲ್ಲಿ ನೂರು ಗ್ರಾಂ ಅಕ್ಕಿ, 20 ಗ್ರಾಂ ಬೇಳೆ, 100 ಗ್ರಾಂ ಎಣ್ಣೆ, 50 ಗ್ರಾಂ ತರಕಾರಿ, 5 ಗ್ರಾಂ ಉಪ್ಪು ಕೊಡುತ್ತಿದ್ದೇವೆ, ಇವೆಲ್ಲಾ ಸೇರಿ 400 ಕ್ಯಾಲೋರಿಸ್ ಒಂದು ಮಗುವಿಗೆ ಆಗಬೇಕೆಂದು ಲೆಕ್ಕ ಇಟ್ಟಿದ್ದೇವೆ. ಇವೆಲ್ಲವನ್ನೂ ಲೆಕ್ಕ ಹಾಕಿಕೊಂಡು ಬಂದರೆ ಬೇಳೆ, ಉಪ್ಪು, ಎಣ್ಣೆಗೆ 71 ಪೈಸೆ ಬೀಳುತ್ತದೆ, ತರಕಾರಿಗೆ 50 ಪೈಸೆ ಬೀಳುತ್ತದೆ, Cooking Gas Provide ಮಾಡಿರುವ ಕಡೆ 40 ಪೈಸೆ ಬೀಳುತ್ತದೆ, ಅಕ್ಕಿಗೆ 30 ಪೈಸೆ ಬೀಳುತ್ತದೆ. ಒಟ್ಟು 1.91 ಪೈಸೆ ಆಗುತ್ತದೆ. ಇನ್ನು ಸಂಬಳ. ನೀವು 25 ಜನ ಮಕ್ಕಳಿರುವ ಕಡೆ ಒಬ್ಬರೇ ಕುಕ್ 650–00, 25 ರಿಂದ 70 ಜನ ಮಕ್ಕಳಿರುವ ಕಡೆ ಇಬ್ಬರು ಕುಕ್, ಒಬ್ಬರಿಗೆ 650–00 400–00, 70 ಕ್ಕಿಂತ ಜಾಸ್ತಿ 300 ಕ್ಕಿಂತ ಕಡಿಮೆಯಿರುವ ಕಡೆ 650/–, 450/–, 300–00 ರೂ.ಗಳು ಒಟ್ಟು 1400.00. 300 ಕ್ಕಿಂತ ಜಾಸ್ತಿ ಇರುವ ಕಡೆ 650/–,450/–,400/–,300 ರೂ.ಗಳು ನಾಲ್ಕು ಜನ. ಇಷ್ಟು ಜನಕ್ಕೆ ಅಪಾಯಿಂಟ್‌ಮೆಂಟ್ ಕೊಡುತ್ತಿದ್ದೇವೆ.

ಇದೆಲ್ಲಾ ಸೇರಿದರೆ ಹಳ್ಳಿಗಾಡಿನಲ್ಲಿ ಒಂದು ಮಗುವಿಗೆ ಮೂರು ಚಿಲ್ಲರೆ ರೂ.ಗಳಿಗಿಂತ ಜಾಸ್ತಿ ಬರುವುದಿಲ್ಲ. ಮೂರು ಚಿಲ್ಲರೆಗಿಂತ ಜಾಸ್ತಿ ಬರುವುದಿಲ್ಲ. ಇದರಲ್ಲಿ ಅಕ್ಕಿ portion ಅನ್ನು ಕೇಂದ್ರ ಸರ್ಕಾರದವರು ನಮಗೆ ಕೊಡುತ್ತಿದ್ದಾರೆ, ಉಳಿದದ್ದನ್ನು ರಾಜ್ಯ ಸರ್ಕಾರದವರು ನೀವು ಕೊಡುತ್ತಿದ್ದೀರಿ. ಅಕ್ಕಿಯನ್ನು ಕೂಡ ಬೇಳೆಯನ್ನು 120 ರಿಂದ 125 ಗ್ರಾಂ ನಷ್ಟು ಒಂದರಿಂದ ಐದನೇ ಕ್ಲಾಸ್ ಮಕ್ಕಳಿಗೆ ಏನು ಕೊಡುತ್ತೀರಿ, 25 ಗ್ರಾಂ ಬೇಳೆಯಷ್ಟನ್ನೂ consume ಮಾಡುವುದಿಲ್ಲ, ಎಲ್ಲಾ ಮಕ್ಕಳು ಅಷ್ಟೊಂದು ತಿನ್ನುವುದಿಲ್ಲ, ಕೆಲವು ಉಳಿತಾಯವಾಗುತ್ತದೆ. ನಾನು ಇದಕ್ಕೆ ಒಂದು ನಿದರ್ಶನವಾಗಿ ತಮಗೆ ಹೇಳಬೇಕೆಂದರೆ ಅದಮ್ಯ ಫೌಂಡೇಷನ್ ಎಂದು ಬೆಂಗಳೂರಿನಲ್ಲಿ ಮತ್ತೊಂದು ಫೌಂಡೇಷನ್‌ನವರು ಈ ಕೆಲಸವನ್ನು ಮಾಡುತ್ತಿದ್ದಾರೆ. ಅವರೇನು ಹೇಳುತ್ತಾರೆಂದರೆ, ನಾವೇ ಈ ಫೌಂಡೇಷನ್ ನಡೆಸುತ್ತಿದ್ದೇವೆ, ನಾವೇನು ಮಕ್ಕಳಿಗೆ ಊಟ ಕೊಡುತ್ತಿದ್ದೇವೆ. ಬಹುಶಃ ನಮಗೆ ಸಾಕಾಗುತ್ತಿದೆ. ಅದರಲ್ಲಿ ಸ್ವಲ್ಪ ಉಳಿತಾಯ ಆಗಿದ್ದನ್ನು ನಾವು ಇವತ್ತು ಮಕ್ಕಳ medical care ಗೆ ಬಳಸುತ್ತಿದ್ದೇವೆ.

ಅದಮ್ಯ ಫೌಂಡೇಷನ್ ಯಾರದು ಎಂದು ನಾನು ಬಿಡಿಸಿ ಹೇಳಬೇಕಾಗಿಲ್ಲ. ಸನ್ಮಾನ್ಯ ಅನಂತ್‌ಕುಮಾರ್‌ರವರ ತಾಯಿಯ ಹೆಸರಿನಲ್ಲಿ ನಡೆಯುತ್ತಿರುವಂಥ ಸಂಸ್ಥೆಯಿದು, ಒಂದು ಎನ್.ಜಿ.ಒ. ಇಲ್ಲಿ ಮಾಡುತ್ತಿದ್ದಾರೆ, ರಾಜಸ್ಥಾನದಲ್ಲಿ ಮಾಡುತ್ತಿದ್ದಾರೆ, ಇವರಿಗಿಂಥ effective ಆಗಿ ಮಾಡುತ್ತಿದ್ದಾರೆ, ಅವರೂ ಡಿನೇಷನ್ಸ್ ತೆಗೆದುಕೊಳ್ಳುತ್ತಾರೆ, ನನ್ನ friend ಒಂದು ದಿವಸ ಹೇಳಿದರು, ಆ ತಾರೀಖನ್ನು ಹೇಳುತ್ತೇನೆ, ಆಕಸ್ಮಾತ್ ಯಾರೋ ಹೋಗಿ ಅವರನ್ನು ಕೇಳುತ್ತಾರೆ, 16 ನೇ ಸೆಪ್ಟೆಂಬರ್ ಅಂದು 7.45 ಗಂಟೆಯಲ್ಲಿ ಅವರನ್ನು ಭೇಟಿ ಮಾಡಿ "70.00 ಲಕ್ಷ ರೂ.ಗಳನ್ನು ದಾನ ಕೊಡುತ್ತೇವೆ, ಅದಮ್ಯ ಫೌಂಡೇಷನ್‌ಗೆ ತೆಗೆದುಕೊಳ್ಳಿ" ಎಂದು ಕೇಳಿದರು ಚೆಲುವರಾಯಸ್ವಾಮಿಯವರೇ. ನನಗೂ ಅನಂತ್‌ಕುಮಾರ್‌ರವರಿಗೂ ಯಾವುದೇ ಸಂಬಂಧವಿಲ್ಲ. ಪಾರ್ಟಿ, ಜಾತಿಯದಾಗಲಿ, ಸ್ನೇಹದ್ದಾಗಲಿ ಯಾವ ರೀತಿಯ ಸಂಬಂಧವಿಲ್ಲ. But, his wife refused. "ಇಲ್ಲ ಇಲ್ಲ, 10.00 ಲಕ್ಷ ರೂ.ಗಳನ್ನು ಕೊಡಿ ಸಾಕು, ನನಗೆ ಲೆಕ್ಕ ಕೊಡಲಿಕ್ಕಾಗುವುದಿಲ್ಲ" ಎಂದು. ಸರ್ಕಾರ ಕೊಡುತ್ತಿರುವ ಹಣದಲೇ ನನಗೆ ಸೇವಿಂಗ್ ಆಗುತ್ತಿದೆ, ಅದನ್ನೇ ಬೇರೆ ಕಡೆ ನಾನು ಬಳಸುತ್ತಿದ್ದೇನೆ ಅನ್ನುತ್ತಾರೆ ಅವರು. ಆದರೆ ಇವರಿಗೆ 3.60 ರೂ. ಏನು ಸರ್ಕಾರ ಕೊಡುತ್ತಿದೆ ಅದಲ್ಲದೇ contribution ನ್ನು ಎಲ್ಲ ಕಡೆ, ಮನೆ ಮನೆಗೆ ಹೋಗಿ ವಸೂಲಿ ಮಾಡುವುದಕ್ಕೆ ಜನವಿಟ್ಟು ಇವತ್ತು ವಸೂಲಿ ಮಾಡುತ್ತ ಇದ್ದಾರೆ. ಯಾವ ಲೆವೆಲ್‌ಗೆ ಇದ್ದಾರೆ ಸಾರ್ ಇವರು?

> " Bhatnagar to head largest NGO School lunch programme. Shikha Bhatnagar, 30 has been appointed Executive Director of the new U.S. Office of the Akshaya Patra Foundation, the world's largest Non Governmental Organisation run school lunch programme. Thanks to a major great grant from the Desh and Deshpande Foundation. The Akshaya Patra Foundation is in operation since the year 2000 and has its base in Bangalore and helps unprivileged

> children in India, breaks the cycle of poverty by increasing their nutritional nitake and promoting their education. Bhatnagar, will oversee and manage all operations including fund raising, administrative and public relation."

ಒಂದು ದೊಡ್ಡ ಆಫೀಸ್‌ನ್ನು ಅಲ್ಲಿ ಮಾಡುತ್ತಾರೆ ಇವರು. ಅವರು ಈ ಫಾರ್ಮ್ಯಾಟ್ಸ್ ಕೊಡುತ್ತಾರೆ. ಇದರಲ್ಲಿ ನಮ್ಮ ಗರೀಬಿ ಮಕ್ಕಳ ಫೋಟೊ, ನಾನು ಆ CD ಎಲ್ಲ ತಂದಿದ್ದೆ display ಮಾಡೋಣ ಅಂತ. ಅವಕಾಶವಾಗಲಿಲ್ಲ. "ಇವರೇನಾದರೂ ಇರದಿದ್ದರೆ ನಾನು ಓದುತ್ತಿರಲಿಲ್ಲ ಅಂತ ಹೇಳುವ ಬಡ ಮಕ್ಕಳು, ನನ್ನಪ್ಪ ಅಮ್ಮ ಏನೋ ಕೈಬಿಟ್ಟುಬಿಟ್ಟರು, ಇವರೇನೋ ನನ್ನನ್ನು ಸಾಕುತ್ತಿದ್ದಾರೆ" ಅಂತ ಹೇಳೋ ಮಕ್ಕಳನ್ನು internet ನಲ್ಲಿ ಹಾಕಿಬಿಟ್ಟು ಇಡೀ ಪ್ರಪಂಚಕ್ಕೆ ತೋರಿಸುತ್ತಿದ್ದಾರೆ. ಇಂಡಿಯಾ ದೇಶ ಈ ಸ್ಥಿತಿಯಲ್ಲಿದೆ, ಇಂಡಿಯ ದೇಶಕ್ಕೆ ಯಾರಾದರೂ ದಾತರಿದ್ದರೆ that is only Madhu Pandit Das. ಇವರ ಜೊತೆಗೆ ಬಹುಶಃ ದುರ್ದೈವ, ಯಾಕೋ ಏನೋ ಗೊತ್ತಿಲ್ಲ. ನಮ್ಮ ನಾರಾಯಣ ಮೂರ್ತಿಯವರು ಎಲ್ಲೆಲ್ಲಿ ಹೋಗುತ್ತಾರೆ ಇವರನ್ನು ಕರೆದುಕೊಂಡು ಹೋಗುತ್ತಾರೆ. ನಾರಾಯಣ ಮೂರ್ತಿಯವರನ್ನು ರಾಜಸ್ಥಾನಕ್ಕೆ ಸರ್ಕಾರ ಕರೆದರು, ಬನ್ನಿ ನಮ್ಮಲ್ಲಿ ಸ್ವಲ್ಪ software ದ್ದು ಸಹಾಯ ಮಾಡಿ ಅಂತ ವಸುಂಧರ ರಾಜೇಯವರು invite ಮಾಡಿದರು. But, this fellow went with Mr. Narayana Murthy. This fellow got cotract in Rajasthan. ಆದರೆ 3.60 ರೂ. ರಾಜಸ್ಥಾನ ಸರ್ಕಾರ ಕೊಡುತ್ತಿದೆ ಅಂತ ಒಪ್ಪಿ ಬ್ರೋಷರ್‌ನಲ್ಲಿ ಹೇಳುತ್ತಾರೆ. ಅಲ್ಲಿ ಸುಧಾಮೂರ್ತಿಯವರು ಒಂದು ಕೋಟಿ ರೂ. ದಾನ ಕೊಡುತ್ತಾರೆ ಇವರಿಗೆ. ಮುಂದಕ್ಕೆ ಏನು ನಾರಾಯಣ ಮೂರ್ತಿ ಹೇಳುತ್ತಾರೆ?

> " This is a wonderful programme and needs to be further strengthened. The programme should get adequate support so that each and every child in India does not go hungry. This

> programme is strong supporter of education, which is the future of India. The swamiji's should get the 'Padma Vibhushan' award. Such good work should not go unnoticed"

ನಮ್ಮ ರಾಷ್ಟ್ರಪತಿಗಳು, ಪದ್ಮವಿಭೂಷಣ ಪ್ರಶಸ್ತಿ ಇವರಿಗೆ ಕೊಡಬೇಕು, ಅಂಥಾ ಒಂದು ಕೆಲಸವನ್ನು ಇವರು ಇಲ್ಲಿ ಮಾಡುತ್ತಾ ಇದ್ದಾರೆ ಅಂತ. ಅದಾದ ಮೇಲೆ

> "Corporates, include Infosys, Bharathi Enterprises, ABB, KPMG, ICICI Banks, CITI Bank,Canara Banks, Syndicate Bank many other ONGCs and Mysore Minerals."

I am shocked. How can Mysore Minerals give such a huge amount ? 70 ಲಕ್ಷ ಒಂದು ಚೆಕ್‌ನಲ್ಲಿ ಕೊಡುತ್ತಾರೆ, ಅದೂ ಮುಖ್ಯಮಂತ್ರಿಗಳನ್ನು ನಿಲ್ಲಿಸಿಕೊಂಡು. ಆಗಲಾದರೂ ನಮ್ಮವರು ಕೇಳಬಹುದಿತ್ತು, ಏನಪ್ಪ ಸರ್ಕಾರದಿಂದ ದುಡ್ಡು ತಗೋತಿದಿಯ, ಇಷ್ಟೆಲ್ಲಾ ಮಾಡ್ತಿದೀಯ ಅಂತ. ಈಗ ಇವರು ಬೆಂಗಳೂರಿನಲ್ಲಿರುವ ಜಮೀನು ಒಂದೊಂದಾಗಿ ಈ Foundation ಕೆಳಗೆತೆಗೆದುಕೊಳ್ಳುವುದಕ್ಕೆ ಕೈ ಹಾಕುತ್ತಿದ್ದಾರೆ. ನಾನು ಏನು ಹೇಳಿದೆ ಅದಕ್ಕೆ ಅಡಿಶನಾಗಿ ಇವರು ಸುಮಾರು ಜಾಗಗಳನ್ನು ಬೆಂಗಳೂರಿನಲ್ಲಿ ಇವತ್ತು ತಗೊಂಡಿದ್ದಾರೆ. 28 ಎಕರೆ ಜಾಗದ ಒಂದು ಹಿಲ್ಲನ್ನು ಇವರಿಗೆ 'Theme Park' ಅಂತ ಬೆಂಗಳೂರಿನಲ್ಲಿ ಗ್ರಾಂಟ್ ಮಾಡಿದ್ದೇವೆ. ಆ ಜಾಗದಲ್ಲಿ ಎಂಥ 'Theme Park' ಏನು ಎತ್ತ ಅಂತ ಇವತ್ತಿನವರೆಗೂ ಅವರೇನು ಯಾರಿಗೂ ಹೇಳಿಲ್ಲ. Since 4 years ಒಂದು guest house ಮಾತ್ರ ಅಲ್ಲಿ ಕಟ್ಟಿಬಿಟ್ಟು, He is waiting for the commercial elevation of the land area.

ಅದೇನಾದರೂ ರೇಟ್ ಜಾಸ್ತಿಯಾದರೆ ಅಲ್ಲಿಂದ ಮುಂದಕ್ಕೆ ಅವರು ಬಂದು ಬಿಟ್ಟು ಒಂದಷ್ಟು flats ಕಟ್ಟಿದ್ದಾರೆ. ಅದರ ಪಕ್ಕಕ್ಕೆ 18 ಎಕರೆಗೆ 28/1 notice ಇವತ್ತು issue ಮಾಡಿದ್ದಾರೆ. ಆದರೆ ಅಲ್ಲಿ ಮನೆಗಳಿದೆ, shops ಇದೆ, Schools

ಇದೆ, ಸ್ಮಶಾನವಿದೆ, ಕೆ.ಐ.ಎ.ಡಿ.ಬಿ ನಾಳೆ ನಾಡಿದ್ದರಲ್ಲಿ ಇದನ್ನು ಮಂಜೂರು ಮಾಡಲು ತರಾತುರಿಯಲ್ಲಿ ನಿಂತಿದೆ. ಇಷ್ಟೆಲ್ಲಾ ಭೂಹಗರಣ ಸಮಿತಿ ಅಂತ ಮಾಡಿ ಇಷ್ಟೆಲ್ಲಾ ಬೆಂಗಳೂರು ಕರ್ನಾಟಕದಲ್ಲಿ ಆಗುತ್ತಿದೆ ಅಂದರೂ Now KIADB is in hurry. ಸರ್ಕಾರದ ಬಗ್ಗೆ ಇವರೇನು ಮಾತನಾಡುತ್ತಾರೆ ಸಾರ್? ಅವರೇ ಕೊಟ್ಟಿರುವ Magazine ನಿಂದ ಒಂದು ಮಾತು ಓದುತ್ತೇನೆ: ಪ್ರಭೂಪಾದ ಅಂತ ಅವರ ಗುರು ಹೇಳಿದ್ದು ಇದು,

> " People are not bad. I have seen. They are very nice. The Government-the rascals. A few men who are controlling the Government, they are all roughs and thieves. Everywhere the masses are innocent. Whereas, these rascals have misled them. In India and Russia, I have seen the mass of people. They are very nice. The Hindus and Muslims, they are innocent. They don't fight. These politicians engage them to fight artificially for their political ambition. The wars declared now a days on account of these rascal politicians. The people do not want it"

This is his attitude. This is how he speaks about the elected representatives and Government machinery. It is a printed Magazine. ಅಲ್ಲ, ಮ್ಯಾಗಜೈನ್ ಕೃಷ್ಣ ವಾಯ್ಸ್ ಅವರದೇ, ನವೆಂಬರ್ 2006, ಇಂಥ ಒಬ್ಬ ಮನುಷ್ಯನಿಗೆ ಸುಮಾರು 5 ಲಕ್ಷ ಮಕ್ಕಳಿಗೆ ಇವತ್ತು ಆಹಾರ ಕೊಡುವ ಸ್ಥಿತಿಯನ್ನು ನಾವು ನಿರ್ಮಾಣ ಮಾಡಿದ್ದೇವೆ. ಕರ್ನಾಟಕದಲ್ಲಿ ಮೂರು ಲಕ್ಷ, ರಾಜಸ್ಥಾನದಲ್ಲಿ 2 ಲಕ್ಷ, ಈಗ ಮುಂದಿನ ಹುನ್ನಾರ ಏನು ನಡೆದಿದೆ? ನಾವು ಏತಕ್ಕೆ ಇದನ್ನು ಇಲ್ಲಿ ಎತ್ತಬೇಕಾಗಿದೆ ಅಂದರೆ ಇವರಿಗೆ part of Hubli ಕೊಟ್ಟಿದ್ದರು,

ಬಳ್ಳಾರಿ ಹೀಗೆ ಮೂರ್ನಾಲ್ಕು ಜಿಲ್ಲೆಗಳಲ್ಲಿ ಅಲ್ಲಿರುವ ಎಲ್ಲ ಅಡಿಗೆಯವರನ್ನು ತೆಗೆದುಹಾಕಿ ಅಕ್ಷರ ದಾಸೋಹವನ್ನು ಅಕ್ಷಯಪಾತ್ರದವರಿಗೆ ವಹಿಸಿಕೊಡುವಂತಹ ಒಂದು ಹುನ್ನಾರ ನಿಮ್ಮ ಸರ್ಕಾರದಲ್ಲಿ ನಡೆದಿದೆ. NGO ಗೆ ಕೊಡುತ್ತೇವೆ ಅಂತ ಗೊತ್ತಾಗಿ ಅಲ್ಲಿ ಅಡುಗೆ ಮಾಡುವವರೆಲ್ಲ ಬಂದು ಸ್ಟ್ರೈಕ್ ಮಾಡಿದ್ದಾರೆ ನೆನ್ನೆ, 6 ರಿಂದ 7 ಸಾವಿರ ಜನ. ಇದಕ್ಕೆ ಯಾರು ಜವಾಬ್ದಾರರು ಏನು ಎಂಬುದು ನಮಗೆ ಗೊತ್ತಾಗಬೇಕು.

ಇಷ್ಟಕ್ಕೇ ನಿಲ್ಲುವುದಿಲ್ಲ, ಇವತ್ತು ಕೆ.ಐ.ಎ.ಬಿ.ಡಿ ಮುಂದೆ ಇವತ್ತು ಅರ್ಜಿ ಯಾರದ್ದೂ ಆಗುವುದಿಲ್ಲ, ಆದರೆ ಇವರದ್ದು ಆಗುತ್ತದೆ. ಅದು ಹೇಗೆ ಆಗುತ್ತದೆ? ಸನ್ಮಾನ್ಯ ಯಡಿಯೂರಪ್ಪನವರು ಕಾಗದ ಬರೆಯುತ್ತಾರೆ de-notify ಮಾಡಿ ಅಂತ. ಅದೃಷ್ಟಕ್ಕೆ ಆ ಕಾಪಿಗಳು ಸಿಕ್ಕಿವೆ, ಕೊಡುತ್ತೇನೆ. ದಿನಾಂಕ 30-01-2006 ಇವರು ಜಾಗ ಕೇಳಿದ್ದಾರೆ. "ಸರ್ವೆ ನಂ. 38/2 ರಲ್ಲಿ 27 ಗುಂಟೆ, ವಸಂತಪುರ, 38/3 ರಲ್ಲಿ 26 ಗುಂಟೆ, ಕೈಗಾರಿಕಾ ವಲಯಕ್ಕಾಗಿ ಭೂಸ್ವಾಧೀನಗೊಳಿಸುತ್ತಿದ್ದು ತಮಗೆ ಈ ಆಸ್ತಿಯನ್ನು ಬಿಟ್ಟರೆ ಬೇರೆ ಜಾಗ ಇಲ್ಲವೆಂದು ಮೇಲಿನವರು ನನಗೆ ಅರ್ಜಿ ಕೊಟ್ಟಿದ್ದಾರೆ, ದಾಖಲೆಗಳನ್ನು ಪರಿಶೀಲಿಸಿದ್ದೇನೆ. ಒಟ್ಟು ಸುಮಾರು 30 ಎಕರೆ ಇದೆ. ದಾಖಲೆಗಳನ್ನು ಪರಿಶೀಲಿಸುತ್ತೇನೆ. ಪುಟ ಸಂಖ್ಯೆ 10 ರಲ್ಲಿ checklist ನಂತೆ ಈ ಪ್ರದೇಶ ವಸತಿ ಪ್ರದೇಶವೆಂದು ತಿಳಿಸಲಾಗಿದೆ. ಫೋಟೊಗಳನ್ನು ಪರಿಶೀಲಿಸಿದಾಗ ಅರ್ಜಿದಾರರು ತಿಳಿಸಿದಂತೆ ಇಲ್ಲಿ ಮನೆಗಳೂ, ಸಮಾದಿ ಇತ್ಯಾದಿ ಇರುವುದಾಗಿ ತಿಳಿದುಬಂದಿರುತ್ತದೆ.

ಇಲ್ಲಿ ಭೂಸ್ವಧೀನಪಡಿಸಲು ಉದ್ದೇಶಿಸಿರುವ ಪ್ರದೇಶ ಬಹಳ ಕಡಿಮೆಯಿದ್ದು ಈ ಪ್ರದೇಶದಲ್ಲಿ ಯಾವುದೇ ಕೈಗಾರಿಕಾಭಿವೃದ್ಧಿ ಮಾಡಲು ಸಾಧ್ಯವಾಗುವುದಿಲ್ಲವೆಂದು ಮನದಟ್ಟಾಗುತ್ತದೆ. ಕಂಡಿಕೆ 19 ನ್ನು ಪರಿಶೀಲಿಸಬಹುದು. 17.25 ಎಕರೆ ಜಮೀನನ್ನು ಎರಡು ಸಂಸ್ಥೆಗಳಿಗೆ ಅಂದರೆ India Heritage Trust ಮತ್ತು ISKCON charitiesಗಳಿಗೆ ಭೂಸ್ವಾಧೀನಪಡಿಸುತ್ತಿರುವುದು ತಾಂತ್ರಿಕವಾಗಿ ಸರಿಯಾದ ಕ್ರಮವಲ್ಲವೆಂದು ಅಭಿಪ್ರಾಯಪಡುತ್ತೇನೆ. ಈ ಹಿನ್ನೆಲೆಯಲ್ಲಿ ಭೂಸ್ವಾಧೀನಪಡಿಸಲು ಉದ್ದೇಶಿಸಿರುವ ಬೆಂಗಳೂರು ಉತ್ತರಹಳ್ಳಿ ಹೋಬಳಿ ವಸಂತಪುರ ಗ್ರಾಮ ಸರ್ವೆ ನಂ. 38/2 ರಲ್ಲಿ extent ಭೂಸ್ವಾಧೀನದಿಂದ ಕೈಬಿಡಲು ಆದೇಶಿಸಿದೆ. ಸನ್ಮಾನ್ಯ ಬಿ.ಎಸ್. ಯಡಿಯೂರಪ್ಪ, ಸನ್ಮಾನ್ಯ ಕೆ.ಎಂ. ಶಿವಕುಮಾರ್, ಸರ್ಕಾರದ ಪ್ರಧಾನ ಕಾರ್ಯದರ್ಶಿ." ಆದರೆ, ದಿನಾಂಕ 23-06-06 ಕ್ಕೆ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು

ಅವರೇ ಕೆ.ಐ.ಎ.ಡಿ.ಬಿ ಜವಾಬ್ದಾರಿಯನ್ನು ಇಟ್ಟುಕೊಂಡಿದ್ದರು. 'ಈ ಜಮೀನು acquire ಆಗಕೂಡದು' ಎಂದು ಅವರು ಸ್ಪಷ್ಟವಾಗಿ ಬರೆಯುತ್ತಾರೆ. ಆದರೆ, ಇವತ್ತಿನವರೆಗೂ ಇದು drop ಆಗಿಲ್ಲ. Drop ಆಗುವುದೂ ಇಲ್ಲ. I assure this House, ಇದು drop ಆಗುವುದಿಲ್ಲ. ಆ ಕಾರಣವನ್ನು ನಾನು ಇಲ್ಲಿ ಹೇಳುವುದಿಲ್ಲ. ನಾವು ಎಲ್ಲಿಂದ ಮಾಹಿತಿಗಳನ್ನು ತೆಗೆಯುತ್ತೇವೆಂದು ನಿಮಗೆ ಗೊತ್ತಿಲ್ಲ, ಸಾರ್ ಇವತ್ತಿನವರೆಗೂ ಇದು drop ಆಗಿಲ್ಲ. ನೋಡಿ, ಘೋಟೋಗಳನ್ನು ನಾನು ಸಭೆಗೆ ತೋರಿಸುತ್ತಿದ್ದೇನೆ. Entire Dalits who are living there ಗಲಾಟೆ ಮಾಡಿದ್ದಾರೆ, protest ಮಾಡಿದ್ದಾರೆ, ಈ ಜಾಗವನ್ನು acquire ಮಾಡಬೇಡಿರೆಂದು ಹೇಳಿದ್ದಾರೆ. ನಮ್ಮ ಮನೆಗಳನ್ನು ಹಾಳು ಮಾಡಬೇಡಿರೆಂದು ಹೇಳಿದ್ದಾರೆ. ಇದೊಂದು commercial enterprise, Charity ಅಲ್ಲವೆಂದು protest ಮಾಡಿದೆ, ಪೊಲೀಸ್‌ನವರು ಅವರ ಮೇಲೆ action ತೆಗೆದುಕೊಳ್ಳುತ್ತಾರೆ! ಒದ್ದು, ಒದ್ದು ಅವರುಗಳನ್ನು ಎಳೆದುಕೊಂಡು ಹೋಗುತ್ತಿದ್ದಾರೆ. ಈ ರಾಜ್ಯದ ಸ್ಥಿತಿಯನ್ನು ನೀವು ಎಲ್ಲಿಗೆ ತಂದಿದ್ದೀರಿ?

ನಿಮ್ಮ ಉಪ ಮುಖ್ಯಮಂತ್ರಿಗಳು ಹೋಗುತ್ತಾರೆ. ಮನೆಗಳಿವೆ, ಸ್ಮಶಾನ ಇದೆ. ಇವತ್ತು ಆ ಜಾಗಕ್ಕೆ ಹೋಗಿ ಅವರುಗಳನ್ನು forcibly evict ಮಾಡಿಸುವುದಕ್ಕೆ ಹೋಗಿದ್ದಾರೆ. ನೋಡಿ, this is the complex, a charitable trust has built in Bangalore. ಯಾರಾದರೂ ಮನುಷ್ಯತ್ವ ಇರುವವರು ಈ ರಾಜಕಾರಣದಲ್ಲಿ ಇನ್ನೂ ಇರಬಹುದೇ ಸರ್? 1, 100 ಚಿಲ್ಲರೆ flats ಒಂದೇ building ನಲ್ಲಿ ಬರುವಂತಹ complex ಕಟ್ಟುವವನಿಗೆ ದಾನ-ಧರ್ಮ ಸಂಸ್ಥೆಯೆಂದು ತಿಳಿದುಕೊಂಡು ನಾವೆಲ್ಲರೂ ವಹಿಸಿಕೊಡುತ್ತಿದ್ದೇವೆ, ಎಲ್ಲವನ್ನೂ ವಹಿಸಿಕೊಡುತ್ತಿದ್ದೇವೆ. ನಾವು ಎಲ್ಲಿಗೆ ಬಂದಿದ್ದೇವೆ? ತಾವು ಈ ಘೋಟೋಗಳನ್ನು ನೋಡಬೇಕು. ನೋಡಿ, ಸರ್, ಪೊಲೀಸರಿಗೆ ಇರುವ ಶಕ್ತಿಯನ್ನು? ಒಬ್ಬ ಎಂ.ಎಲ್.ಎ ಗೆ ಯಾರಾದರೂ ಇಷ್ಟೊಂದು ರಕ್ಷಣೆ ಕೊಡುವುದನ್ನು ಎಲ್ಲಿಯಾದರೂ ನೋಡಿದ್ದೀರಾ? ಒಬ್ಬ ಮಂತ್ರಿಗೆ ಇಷ್ಟೊಂದು ರಕ್ಷಣೆ ಕೊಡುವುದನ್ನು ನೋಡಿದ್ದೀರಾ? After, the writings of the Hon'ble Minister to denotify. ಇದನ್ನು ಕೈಬಿಟ್ಟಿಲ್ಲ. ಸರ್, ತೆಗೆದುಕೊಂಡಿರುವ ಎಲ್ಲದರ ಬಗ್ಗೆ ನಾನು ಆಗಲೇ list ಓದಿದೆ.

ಆದರೆ, ಪುಣ್ಯಕ್ಕೆ ಅಲ್ಲೊಂದಿಷ್ಟು ಇದ್ದ ದಲಿತ ಹುಡುಗರು ನನ್ನ ಬಳಿಗೆ ಬಂದಿದ್ದರು. ನನಗೆ ಬೇರೆ ಯಾರೂ ಮಾಹಿತಿ ಕೊಡಲಿಲ್ಲ. "ಸರ್, ನಮ್ಮ ಮನೆಗಳು

ಹಾಳಾಗಿ ಹೋಗುತ್ತಿವೆ. ಅವತ್ತು ತಾವು ನೈಸ್ ಕಂಪನಿ ವಿರುದ್ಧ ಸ್ವಲ್ಪ ಮಾತನಾಡಿದಿರಿ. ದಯಮಾಡಿ ಇದನ್ನೂ ಸಾರ್ವಜನಿಕವಾಗಿ ಪ್ರಚಾರಕ್ಕೆ ತಂದುಬಿಡಿ, ಅದೇನಾಗುತ್ತದೋ, ನಮ್ಮ ಹಣೆಬರಹ" ಎಂದು ಕೇಳುವ ಸ್ಥಿತಿಗೆ ನಾವು ಬೆಂಗಳೂರಿಗೆ ತಂದಿದ್ದೇವೆ. After all, ಇದೆಲ್ಲಾ ಆದಮೇಲೆ ಮನುಷ್ಯ ಏನು ಮಾಡುತ್ತಾನೆ ಸರ್? ಮುಂದುಗಡೆ ಇರುವ ಜಾಗವನ್ನೆಲ್ಲಾ ಮಾರುತ್ತಿದ್ದಾನೆ. I will produce documents. 5 ಕೋಟಿ, 6 ಕೋಟಿ, 7 ಕೋಟಿ ರೂಪಾಯಿಗಳಿಗೆ ಮಾರಿಬಿಟ್ಟು, ಹಿಂದುಗಡೆ ಇರುವುದನ್ನು acquire ಮಾಡಿಕೊಂಡು ಬರುತ್ತಿದ್ದಾರೆ. ಇಲ್ಲಿ ನಾನು ನಿಮಗೆ sketch ತೋರಿಸುತ್ತಿದ್ದೇನೆ. ಇಡೀ ಗುಡ್ಡವನ್ನು ಅವರು ಬಿಡಿಸಿಕೊಂಡು ಬಿಟ್ಟಿದ್ದಾರೆ. ಒಂದೇ ಒಂದು Guest House ಕಟ್ಟಿದ್ದಾರೆ, ಅದನ್ನು ಮಾರಬೇಕು. ಅಲ್ಲಿಂದ ಸ್ವಲ್ಪ 50–55 ಎಕರೆಗಳಷ್ಟು extent ನಲ್ಲಿ flat ಕಟ್ಟುತ್ತಾರೆ. " ಮುಂದುಗಡೆ ಇರುವ 18 ಎಕರೆಗಳನ್ನು ನನಗೆ acquire ಮಾಡಿಕೊಡಿ" ಎಂದು ಕೇಳುತ್ತಾರೆ.

ಶ್ರೀ ಆಲಂಗೂರು ಶ್ರೀನಿವಾಸ :– ಮಾಧುಸ್ವಾಮಿಯವರೆ, ಆ ಹಣ ಟ್ರಸ್ಟ್‌ಗೆ ಹೋಗುತ್ತದೆಯೇ? ಅಥವಾ ಆತನ ಖಾಸಗಿಗೆ ಏನಾದರೂ ಹೋಗುತ್ತದೆಯೇ?

ಶ್ರೀ ಜೆ.ಸಿ. ಮಾಧುಸ್ವಾಮಿ :– ನಾನು ತಮಗೆ ಹೇಳಿದೆ. Supreme Court decision ಪ್ರಕಾರ ISKCON India ಕ್ಕೂ ಮಧು ಪಂಡಿತ್ ದಾಸ್ ಅವರಿಗೂ ಸಂಬಂಧವಿಲ್ಲ. ಮಧು ಪಂಡಿತ್ ದಾಸ್ ಅವರು ISKCON India ಗೆ ಮೋಸ ಮಾಡಿ ಬೆಂಗಳೂರಿನಲ್ಲಿದ್ದಂತಹ ದೇವಸ್ಥಾನವನ್ನು ISKCON Karnataka ನನ್ನದೆಂದು ಹೇಳಿ I.T. file ಮಾಡಿದರು. ಅದು reject ಆಯಿತು. ಅದು ಅವರಿಗೆ ಸಂಬಂಧವಿಲ್ಲ. ಈಗ Interim Order ಆಗಿಬಿಟ್ಟಿದೆ. ಮಹಿಮಾರವರೆ, Supreme Court ನಲ್ಲಿ ಅದು ತೀರ್ಮಾನವಾಗುವವರೆಗೂ as it is, he was President of his unit appointed by ISKCON, India itself. ಹಾಗಾಗಿ, "Final Order ಆಗುವವರೆಗೂ 5 ಲಕ್ಷ ರೂಪಾಯಿಗಳಿಗಿಂತಲೂ ಜಾಸ್ತಿ ಹಣವನ್ನು ನೀನು ಡ್ರಾ ಮಾಡದಂತೆ, ಪ್ರತಿ drawals ನಲ್ಲಿ maintain ಮಾಡಿಕೊಂಡು ಹೋಗು. ಪ್ರಸಾದಕ್ಕೆ, ಮತ್ತೊಂದಕ್ಕೆ ತೊಂದರೆಯಾಗದಂತೆ ನೋಡಿಕೊಂಡು ಹಾಗು" ಎಂದು ಸುಪ್ರೀಂ ಕೋರ್ಟ್ ಆತನಿಗೆ ಆದೇಶ ಕೊಟ್ಟಿತು.

ಈ ಮನುಷ್ಯ Managing Trustee ಆಗಿ 8 ಟ್ರಸ್ಟ್‌ಗಳನ್ನು create ಮಾಡಿಕೊಂಡಿದ್ದಾನೆ. Yes, he is managing that, still he is managing.

ಆದರೆ, ಅದರ ಕೆಳಗೆ ಹೊಸ ಯೋಜನೆ ಮಾಡುವುದಕ್ಕೆ, ಆ ದೇವಸ್ಥಾನದ ಕೆಳಗೆ ಯಾವುದೇ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಕೋರ್ಟ್ ಮುಂದೆ ಅವಕಾಶವಿಲ್ಲ. ಕೋರ್ಟ್ ಅವನಿಗೆ Just Manage ಎಂದು ಹೇಳಿರುವುದನ್ನು ಬಿಟ್ಟರೆ, ಯಾವುದೇ ಅಧಿಕಾರವನ್ನು ಆತನಿಗೆ ಸ್ಥಿರಗೊಳಿಸಲಿಲ್ಲ. ಹಾಗಾಗಿ, ಅವರು ಏನು ಮಾಡಿದರು ಎಂದರೆ, ಅವರಿಗೆ ಗೊತ್ತು. " One day I will be moved out of this temple trust" ಎಂದು. ಹಾಗಾಗಿ, ಏನು ಮಾಡಿದ್ದಾರೆಂದರೆ, ಇವತ್ತು ಇಡೀ ದುಡ್ಡನ್ನು siphon ಮಾಡುತ್ತಿದ್ದಾರೆ. I will give the dates. ಯಾವ್ಯಾವತ್ತು, ಎಷ್ಟೆಷ್ಟು ಹಣವನ್ನು ಅವರು ಡ್ರಾ ಮಾಡಿದ್ದಾರೆ ಎನ್ನುವುದನ್ನು ಕೊಟ್ಟಿದೆ. ಒಂದೇ ದಿವಸ, with all that, ಆ Order ಇದ್ದರೂ, ಒಂದೊಂದೇ ದಿವಸ 5–6 ಚೆಕ್ಕುಗಳಲ್ಲಿ 20 ಲಕ್ಷ, 25 ಲಕ್ಷ, 35 ಲಕ್ಷದವರೆಗೂ ಅವರು ಡ್ರಾ ಮಾಡಿದ್ದಾರೆ.

ಸತ್ಯನಾರಾಯಣರವರೆ, ಇವತ್ತು ನಾನು ಅದನ್ನೇ ಹೇಳುತ್ತಿರುವುದು. ಇದನ್ನು ಯಾರೂ ಗಮನಿಸಲಿಲ್ಲ, including Government of India, Government of Karnataka. ISKCON ನವರೇ ಇವತ್ತು ಈ ಅಕ್ಷಯ ಪಾತ್ರ ಕಾರ್ಯಕ್ರಮವನ್ನು ನಡೆಸುತ್ತಿದ್ದಾರೆಂದು ನಾವೆಲ್ಲರೂ ತಿಳಿದುಕೊಂಡಿದ್ದೇವೆ. ಇದು ಎಲ್ಲರ ಭಾವನೆಯೂ ಆಗಿದೆ. ಇದು ಆಕಸ್ಮಿಕವೋ ಅಥವಾ ಯಾರೋ ಮಧ್ಯದಲ್ಲಿ ಸೇರಿಕೊಂಡು ಮಾಡಿದ್ದಾರೋ, ನಮಗೆ ಗೊತ್ತಿಲ್ಲ. ಆದರೆ, ಇವತ್ತು he is not part of ISKCON, India, ISKCON, India's head office is in Mumbai. ಅವರು world -wide ಸುಮಾರು centers ಇಟ್ಟುಕೊಂಡಿದ್ದಾರೆ. ಅಮೇರಿಕಾದಲ್ಲಿರುವವರು ISKCON ಹೆಸರಿನಲ್ಲಿ Office ಮಾಡಲಿಲ್ಲ. 'ಅಕ್ಷಯ ಪಾತ್ರಾ' ಎಂದು ಬೇರೆ ಹಸರಿನಲ್ಲಿ ಮಾಡಿ, ನಾನು ಆಗಲೇ ಹೇಳಿದೆನಲ್ಲ, ಆಕೆಯನ್ನು ಇವರು ಅಲ್ಲಿಗೆ ನೇಮಕ ಮಾಡಿಬಿಟ್ಟರು. ಇದನ್ನು ಏನು ಮಾಡಿದ್ದಾರೆಂದರೆ, ಆಕೆಗೆ ಒಂದೇ ಕೆಲಸ. ಏನೆಂದರೆ, fund rise ಮಾಡುವುದು

ಇದರ ಜೊತೆಗೆ, ಆಗಾಗ್ಗೆ ಇವರು ಏನು ಮಾಡುತ್ತಾರೆಂದರೆ, ಊಟದ arrangements ಮಾಡುತ್ತಾರೆ. "ನಿಮ್ಮನ್ನು ಊಟಕ್ಕೆ ಕರೆಯುತ್ತಿದ್ದೇವೆ, ಬನ್ನಿ" ಎಂದು ಊಟಕ್ಕೆ ಕರೆದಾಗ ಏನು ಮಾಡುತ್ತಾರೆ? ನಾನು ಆಗಲೇ ಹೇಳಿದೆ. ಒಂದು ಊಟಕ್ಕೆ 280 ರೂಪಾಯಿ, family ಗೆ ಇಷ್ಟು, ಇದೆಲ್ಲವನ್ನೂ ಒಳಗೊಂಡ ಒಂದು brochure ಅನ್ನು publish ಮಾಡುತ್ತಾರೆ. publish ಮಾಡುವ ಕಾಲದಲ್ಲಿ ನಾನು ಆಗಲೇ ಹೇಳಿದೆ. ಸರ್ ದುರ್ದೈವ. ಈರುಳ್ಳಿ ಮತ್ತು ಬೆಳ್ಳುಳ್ಳಿಯನ್ನು ಇಲ್ಲಿ ಬಳಸುವುದಿಲ್ಲ.

You are assured ಎಂದು ಹಾಕುತ್ತಾರಲ್ಲ. ಸರ್. Yes, it is on record. It is in this brochure. ಈರುಳ್ಳಿ ಮತ್ತು ಬೆಳ್ಳುಳ್ಳಿಯನ್ನು ಅಲ್ಲಿ ಮುಟ್ಟಿಸುವುದಿಲ್ಲವಂತೆ! ಎಲ್ಲಿಗೆ ಹೋಗುತ್ತಿದ್ದೇವೆ? ರುಮಾಲಿ ರೋಟಿ, ಅವರು ಕೊಡುವ food items ಇದಾಗಿದೆ. ಅವರಿಗೆ ನಾನು ಹೇಳುತ್ತೇನೆ. Vegetarian Food Festival for New Year ನಲ್ಲಿ ಅವರು ಹೇಳುತ್ತಾರೆ.

> "The festival encompassed a veritable treat of Indian vegetarian cuisine and also exotic, heritage cuisine of countries that had socio-cultural and linguistic links with India for centuries, like Pakistan, Afganistan, Nepal, Srilanka, Indonesia, Bangladesh, etc., Regional specialties included kakori kebabs and kabuli naan from Afghanistan, Bermese khou suey, momos from Nepal, gado gado from Indonesia, bonchi uyala from Sri Lanka, Zafrani kofta and khubani ka meeta from Pakistan, besides flavoured rumali roti, 'dum' biriyani, etc., The emphasis was on pure vegetarian, non-onion, no-garlic"

Onion and Garlic are consumed by Shudras. ಅಷ್ಟೂ ತಿಳಿದುಕೊಳ್ಳದಿದ್ದರೆ, ನಾವು ಈ ಶಾಸನಸಭಾ ಸದಸ್ಯರಾಗಿ ಏಕಿರಬೇಕು? ಇವರೆಡೂ ನಮ್ಮದು. ಇವು ಶೂದ್ರರ ಆಹಾರಗಳು. He says: ಅವರೆಡನ್ನೂ ಮಾಡುವುದಿಲ್ಲವಂತೆ. ಅವನು ಏನಾದರೂ ಕೊಟ್ಟುಕೊಳ್ಳಲಿ. Onion, Garlic ಕೊಡುವುದಿಲ್ಲ. ಆದರೆ, ನೀವು ಇಲ್ಲಿಗೆ ಊಟಕ್ಕೆ ಬನ್ನಿ ಎಂದು ಬರೆದದ್ದು ಏಕೆ? So, it is a Constitutional guarantee Sir. It is a public festival, he cannot do that. ಹಾಗಾದರೆ, ನಾವು ಈ ರಾಷ್ಟ್ರದಲ್ಲಿ untouchables ಆಗಿದ್ದೇವಾ? ಇಂತಹ

mentality ಇರುವ ಒಬ್ಬನಿಗೆ 5 ಲಕ್ಷ ಮಕ್ಕಳಿಗೆ ಊಟ ಮಾಡಿಸುವ ವ್ಯವಸ್ಥೆಯನ್ನು ನೀವು ವಹಿಸಿಕೊಟ್ಟಿದ್ದೀರಲ್ಲ, ಆ ಮಕ್ಕಳ food habits ಮುಂದೆ ಏನಾಗಬಹುದು? ಎಂಬುದೇ ನಮ್ಮ ಪ್ರಶ್ನೆಯಾಗಿದೆ. ಈ ರಾಜ್ಯದಲ್ಲಿ ನಾವು ಬೆಳೆಯುತ್ತಿರುವ ದವಸ-ಧಾನ್ಯಗಳು ಯಾವುವು ಇದರಲ್ಲಿ ಸೇರುವುದಿಲ್ಲವಲ್ಲ, ನಮ್ಮ ರೈತನ ಗತಿ ಏನಾಗಬಹುದು?

ಈ ಮಕ್ಕಳನ್ನು ನಾವು ಹೀಗೇ ಬೆಳೆಸಿಕೊಂಡು ಹೋಗಿ ರಾಗಿ ತಿನ್ನುವುದು ಅಪವಿತ್ರ, ಜೋಳ ತಿನ್ನುವುದು ಪಾಪ, ಈರುಳ್ಳಿ ತಿನ್ನುವುದು ಪಾಪ, ಬೆಳ್ಳುಳ್ಳಿ ತಿನ್ನುವುದು ಪಾಪ, ಇವೆಲ್ಲವನ್ನೂ ಈಗಿನಿಂದಲೇ ಅವರಲ್ಲಿ cultivate ಮಾಡಿಕೊಂಡು ಬರುವಂತಹ ಒಬ್ಬ ವ್ಯಕ್ತಿ ಕೈಗೆ ಇಂತಹ ವ್ಯವಸ್ಥೆಯನ್ನು ನಾವು ಕೊಟ್ಟುಬಿಟ್ಟಿದ್ದೇವಲ್ಲ, ಇದು ದುರ್ದೈವ. ಇದು ಸಾಮಾನ್ಯವಾದ ಘಟನೆಯೆಂದು ನಾನಂತೂ ಭಾವಿಸುವುದಿಲ್ಲ. ಏಕೆಂದರೆ ನಮಗೂ ಇವತ್ತು ವಿದ್ಯೆ ಇದೆ, ಬುದ್ಧಿ ಇದೆ, ಮಾತನಾಡುತ್ತಿದ್ದೇವೆ, ಆದರೆ ನಮ್ಮನ್ನು ಎಲ್ಲಿಗೆ ತೆಗೆದುಕೊಂಡು ಹೋಗಿದ್ದಾರೆ? ಅಧ್ಯಕ್ಷರೆ, the foundation aims to scale up the programme to serve one million children by 2010. We believe success on that scale will offer a model for application by other developmental organizations. ಇವರ ಉದ್ದೇಶ ಇವತ್ತು 10 ಲಕ್ಷ ಮಕ್ಕಳಿಗೆ ಕರ್ನಾಟಕದಲ್ಲಿ cater ಮಾಡುವುದು. ಒಂದು ಮಗುವಿಗೆ ಇವತ್ತು ಅವರು ಕಲೆಕ್ಟ್ ಮಾಡುತ್ತಿರುವಂತಹ ವ್ಯವಸ್ಥೆಯಲ್ಲಿ, sponsorship ಹಣ ನಾವು ಲೆಕ್ಕ ಹಾಕಿದರೆ, 60 ಕೋಟಿ ರೂ.ಗಳು ಆಗುತ್ತದೆ. ಆದರೆ ಏನಾಗುತ್ತಿದೆಯೋ ನನಗೆ ಗೊತ್ತಿಲ್ಲ. ಇದರ ಜೊತೆಗೆ ಯಾರ್‍ಯಾರು ಸೇರಿಕೊಂಡಿದ್ದಾರೆ ಗೊತ್ತಿಲ್ಲ. Rotary Club donates vehicle, ಎಲ್ಲಾ ಸಂಸ್ಥೆಗಳು ಏನು ಇವತ್ತು donations ಕೊಡುತ್ತಿದೆ, ಅದ್ಯಾವುದೂ account ಆಗಿಲ್ಲ.

ಬ್ಯಾಂಕ್‌ನವರಿಗೆ ಸಾಲ ಕೊಡಿ ಎಂದು ಯಾರಾದರೂ ರೈತರು ಹೋಗಿ ಅರ್ಜಿ ಕೊಟ್ಟರೆ, ಇವತ್ತು ಅವರ್‍ಯಾರನ್ನೂ ಕೇಳುವುದಿಲ್ಲ. ನಾನು ಇದಕ್ಕೂ ಬೇರೊಂದು N.G.O ಗೂ ಇರತಕ್ಕ comparative statement ಅನ್ನು ಹೇಳಿಬಿಡುತ್ತೇನೆ. ಇಲ್ಲಿ ಅದಮ್ಯ ಮತ್ತು ಅಕ್ಷಯಕ್ಕೆ ನಾನು ಹೋಲಿಸುತ್ತೇನೆ. ಅದಮ್ಯನವರು 2003 ರಲ್ಲಿ ಸ್ಟಾರ್ಟ್ ಮಾಡಿ, ಇವತ್ತು 2 1/4 ಲಕ್ಷ ಜನರಿಗೆ ಊಟ ಕೊಡುತ್ತಿದ್ದಾರೆ. ಇವರು 2001 ರಲ್ಲಿ start ಮಾಡಿ 5 ಲಕ್ಷ ಮಕ್ಕಳಿಗೆ ಕೊಡುತ್ತಿದ್ದಾರೆ. ಅದಮ್ಯದವರು 3.ರೂ 60 ಪೈಸೆ ನಮಗೆ ಸಾಕು ಎನ್ನುತ್ತಿದ್ದಾರೆ. ಇವರೂ 3.60 ರೂ. ತೆಗೆದುಕೊಳ್ಳುತ್ತಿದ್ದಾರೆ,

ಆದರೆ ಸಾಲುವುದಿಲ್ಲ ಎನ್ನುತ್ತಿದ್ದಾರೆ. Standard of meals same, ನಾವು fix ಮಾಡಿರುವುದು. Is the sponsorship amount sufficient to serve the meals? or Is there any dificit ಎಂದು ಕೇಳಿದರೆ, ಅದಮ್ಯದವರು deficit ಇಲ್ಲವೆಂದು ಹೇಳುತ್ತಾರೆ. Where as this man claims, that the cost of meal is Rs.6, double that of other NGOs, and then resorts to massive fund raising compaign.

Details of savings : About 10-20% of the grains are saved as the children do not consume the standard stipulated quantity of 125 grams per meal ಎಂದು ಅದಮ್ಯದವರು ಡೈರೆಕ್ಟ್ ಆಗಿ ಹೇಳುತ್ತಾರೆ. ಈ ಮನುಷ್ಯ does not report any savings. Any other details of savings up to 10-15% ಆಗುತ್ತದೆಂದು ಅದಮ್ಯದವರು ಒಪ್ಪುತ್ತಾರೆ. ಈ ಮನುಷ್ಯ ಒಪ್ಪುತ್ತಿಲ್ಲ. Cost of operation :- Approximately in the range of Rs. 3.10 to 3.15 per meal ಅದಮ್ಯ ಇದನ್ನು ಒಪ್ಪುತ್ತದೆ. ಇವರು ರೂಪಾಯಿ 6 ಎಂದು ಹೇಳುತ್ತಾರೆ. 2 1/4 ಲಕ್ಷಕ್ಕೆ food ಕೊಡುವವನು 3.10 ರಿಂದ 3.15 ರೂ. ಬೀಳುತ್ತದೆ ಎಂದರೆ, 5 ಲಕ್ಷಕ್ಕೆ ಕೊಡುತ್ತಿರುವವನು ನನಗೆ ಅದೇ ಊಟಕ್ಕೆ 6 ರೂ. ಬೀಳುತ್ತದೆಂದು ಹೇಳುತ್ತಿದ್ದಾನೆ.

ಇನ್ನು Fund raising organized :- Promotional methods, ನಾನು ನಿಮಗೆ ಆಗಲೇ ಹೇಳಿದೆ, Videos ಮಾಡಿದ್ದಾರೆ, Large press reports ಕೊಡುತ್ತಾರೆ, ಮತ್ತು ಎಲ್ಲಾ ಜನರನ್ನೂ ಇಟ್ಟುಕೊಂಡು ಮನೆ ಮನೆಗೂ ಹೋಗುತ್ತಿದ್ದಾರೆ. ಇಷ್ಟೆಲ್ಲಾ ಮಾಡಿಯೂ ಇವರೇನು ಹೇಳುತ್ತಿದ್ದಾರೆ ಎಂದರೆ, " ಈ ದೇಶದ ಮಕ್ಕಳಿಗೆ ನಮ್ಮನ್ನು ಬಿಟ್ಟರೆ ಗತಿಯಿಲ್ಲ"

ಅಧ್ಯಕ್ಷರೆ, ಇದು ಒಂದು ದೊಡ್ಡ ಹಗರಣ ಆಗಿದೆ. ಎಲ್ಲಿಯವರೆಗೆ ಇದು ಹಗರಣ ಆಗಿದೆ ಎಂದರೆ, ನಿಮಗೆ ಈ ಫೋಟೊಗಳನ್ನು ನಾನು ತೋರಿಸುತ್ತೇನೆ. ಯಾವ ರೀತಿಯಾಗಿ ನಮ್ಮ ಮಕ್ಕಳನ್ನು ಇದರಲ್ಲಿ ಚಿತ್ರಿಸುತ್ತಿದ್ದಾರೆ ಎಂಬುದನ್ನು ನೀವೇ ನೋಡಿ. This is the brochure published for Europ and United States. ಈ ದೇಶದ ಮಕ್ಕಳು ಹೀಗೆ ಇವೆ, ಈ ದೇಶವನ್ನು ನಾನೊಬ್ಬ ಭಿಕ್ಷುಕರಿಂದ ಪಾರು ಮಾಡಬಹುದು, ಈ ದೇಶವನ್ನು ನಾನೊಬ್ಬ ಉದ್ಧಾರ ಮಾಡಬಹುದು, ಈ

ದೇಶದಲ್ಲಿ ತಿನ್ನುವುದು ಹೇಗಿದೆ? ನೋಡಿ ಎಂದು ಆತ ಹೇಳುತ್ತಾನೆ. This is the brochure published. ಏನಾಯಿತು ಈ ದೇಶದ ಸ್ವಾಭಿಮಾನ? ಎಲ್ಲಿಗೆ ಹೋಯಿತು ನಮ್ಮ ಗೌರವ ಘನತೆ? ಹೇಳುವವರು, ಕೇಳುವವರು....

ಶ್ರೀ ಆರ್. ಶ್ರೀನಿವಾಸ್ (ಮುಳಬಾಗಿಲು) :– ಮಾನ್ಯ ಮಾಧುಸ್ವಾಮಿಯವರೆ, ನೀವು ನಿಜವಾಗಿಯೂ ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ. ಸದನದಲ್ಲಿ full quorum ಇರುವಾಗ ತಾವು ಈ ಭಾಷಣ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಇತರ ಅನೇಕ ಸದಸ್ಯರುಗಳು ಇದ್ದಾಗ ತಾವು ಮಾತನಾಡಿದ್ದರೆ, ನಿಜಾಂಶ ಏನು ಎಂಬುದು ಎಲ್ಲರಿಗೂ ಗೊತ್ತಾಗುತ್ತಿತ್ತು. ಬಹಳ ಸತ್ಯಾಂಶವಾದ ಸಂಗತಿಗಳನ್ನೇ ತಾವು ಇಲ್ಲಿ ಹೇಳುತ್ತಿದ್ದೀರಿ. ಅವರ ವೈಯಕ್ತಿಕ ಲಾಭಕ್ಕೆ, ನಮ್ಮ ದೇಶದ ಪ್ರಗತಿಯನ್ನು ಬೇರೆ ದೇಶಕ್ಕೆ ತಪ್ಪಾಗಿ ತೋರಿಸಿ, ನಮ್ಮ ದೇಶಕ್ಕೆ ಅವಮಾನ ಮಾಡುತ್ತಿದ್ದಾರೆ. ಇದನ್ನೆಲ್ಲಾ ಹೇಳಲು ಇದು ಸರಿಯಾದಂತಹ ಕಾಲವಲ್ಲ. ನಿಜವಾಗಿಯೂ ಇದನ್ನು ನಮ್ಮ ಎಲ್ಲಾ ಮಂತ್ರಿಗಳು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಇದ್ದಂತಹ ಸಂದರ್ಭದಲ್ಲಿ ಹೇಳಿದ್ದರೆ ಬಹಳ ಒಳ್ಳೆಯದಾಗಿತ್ತು ಎಂದು ನನ್ನ ಸಲಹೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ನಾನು ಬೆಳಿಗ್ಗೆಯೇ Adjournment Motion move ಮಾಡಿದೆ. ಆದರೆ ಮಾನ್ಯ ಅಧ್ಯಕ್ಷರು ಈ ಬಗ್ಗೆ ಮಧ್ಯಾಹ್ನ ಮಾತನಾಡಿ ಎಂದು ಹೇಳಿದ್ದರಿಂದ ಮಾತನಾಡಿದೆ. ನಾನು Adjournment Motion move ಆಚೆಗೆ ಹೋಗಿ ಬಿಟ್ಟಿದ್ದರೆ, ನನಗೆ ಅಷ್ಟು ಗೌರವ ಬರುತ್ತಿರಲಿಲ್ಲ. If at all, ಈ ಚರ್ಚೆಯನ್ನು ಅಪೂರ್ಣ ಮಾಡಿ ಹೋಗಿ ಬಿಟ್ಟಿದ್ದರೆ, ಏನಪ್ಪ, ಇಷ್ಟೆಲ್ಲಾ ಬೆಳಿಗ್ಗೆ ಮಾತನಾಡಿ, ಸುಮ್ಮನಾಗಿ ಬಿಟ್ಟರು ಎನ್ನುವಂತಹ ಭಾವನೆ ಆಚೆ ಬರಬಹುದಾಗಿತ್ತು. ಸಾರ್, ನಾನು ಬಹಳ ಹೊತ್ತು ತೆಗೆದುಕೊಳ್ಳುವುದಿಲ್ಲ. I think I have made out a case. ನಾನು ಬಹುಶಃ ಸರ್ಕಾರದ ತನಿಖೆಗೆ ಲಾಯಕ್ಕಾಗಿರುವಂತಹ ಒಂದು ಪ್ರಕರಣವನ್ನು ಇಲ್ಲಿ ಹೇಳಿದ್ದೇನೆಂದು ಭಾವಿಸುತ್ತೇನೆ.

ಸರ್ಕಾರದವರು ಈ ಬಗ್ಗೆ ತಕ್ಷಣವೇ ತನಿಖೆಯನ್ನು ಮಾಡಬೇಕು ಎಂಬುದನ್ನು ನನ್ನ demand ಆಗಿದೆ. ಅವರ properties ಏನಿದೆ? ಎಲ್ಲೆಲ್ಲಿ ಯಾವ್ಯಾವುದಕ್ಕೆ ಬಳಸಿದ್ದಾರೆ? ಸಾರ್, ನಾನು ಹೇಳುತ್ತೇನೆ, ಅವರ purpose of grant, conversion, ಈಗ ಅವರ change of purpose ಇದಿಷ್ಟೆಲ್ಲಾ ನನ್ನ ಹತ್ತಿರ

ಇದೆ. grant ಮಾಡಿಸಿಕೊಳ್ಳಬೇಕಾದರೆ ಯಾವ ಉದ್ದೇಶಕ್ಕಾಗಿ ಮಾಡಿಸಿಕೊಂಡರು? ಆಮೇಲೆ ಏನೇನು ಮಾಡಿದ್ದಾರೆ? ಬಹಳ ಹೊತ್ತು ಆಗುತ್ತದೆ, ಈಗ ಸಮಯ ಕೂಡ ಇಲ್ಲವೆಂದು ನಾನು reduce ಮಾಡಿಕೊಂಡು ಹೋಗುತ್ತಿದ್ದೇನೆ. ಇದನ್ನೆಲ್ಲಾ I am prepared to submit before the House of Government. ಇದರ ಬಗ್ಗೆ ತನಿಖೆ ಮಾಡಿಸಬೇಕು. ಇಂತಹ fraud ಗಳನ್ನೆಲ್ಲಾ ತಪ್ಪಿಸಬೇಕು. ಈ ರೀತಿಯಾಗಿ ದೇವರ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ಬೆಂಗಳೂರನ್ನು ಲೂಟಿ ಮಾಡುತ್ತಿರುವವರನ್ನು, ನಮ್ಮ ಧರ್ಮಕ್ಕೆ ಹೊಡೆತ ಹೊಡೆಯುವವರನ್ನು, ಸಮಾನತೆಗೆ, ಏಕತೆಗೆ ಧಕ್ಕೆ ತರುವವರ ಮೇಲೆ ಎಲ್ಲಾದರೂ ನಾವು action ತೆಗೆದುಕೊಳ್ಳಲೇಬೇಕಾಗುತ್ತದೆ.

ಇಲ್ಲದೆ ಹೋದರೆ ನಾಗರಿಕ ಜಗತ್ತಿನಲ್ಲಿ ಬಹುಶಃ ಇನ್ನೂ ಸ್ವಾಮಿಗಳು ಎಂತಲೋ, ದೇವರುಗಳು ಎಂತಲೋ, ಏನು ಇವತ್ತಿನವರೆಗೆ ನಮ್ಮ ಮುಗ್ಧ ಜನ ನಂಬಿಕೊಂಡು ಬಂದಿದ್ದಾರೋ, ಅವರಿಂದ ಆಗುತ್ತಿರುವಂತಹ ಅನ್ಯಾಯ ಬೆಳಕಿಗೆ ಬರುವುದಿಲ್ಲ. ಇಂತಹ ಒಬ್ಬೊಬ್ಬರಿಂದ ಮಾತ್ರ ಅನ್ಯಾಯವಾಗುತ್ತಿದೆ. ಎಲ್ಲರನ್ನೂ ನಾನು ಟೀಕೆ ಮಾಡುತ್ತೇನೆಂದೂ ಯಾರೂ ಭಾವಿಸಬಾರದು. ನಾವೇನಾದರೂ ನಮ್ ಹುಡುಗರನ್ನು ಇದರಿಂದ ಆಚೆಗೆ ತರದೆ ಹೋದರೆ, ಬಹುಶಃ ಈ ರಾಜ್ಯವನ್ನು ನಾವು ಕತ್ತಲೆಗೆ ತೆಗೆದುಕೊಂಡು ಹೋಗುತ್ತಿದ್ದೇವೆ ಎನಿಸುತ್ತದೆ. ಇದಕ್ಕೆ ಯಾರು ಉತ್ತರ ಕೊಡುತ್ತೀರೋ, ಏನು ಉತ್ತರ ಕೊಡುತ್ತೀರೋ, ನನಗೆ ಗೊತ್ತಿಲ್ಲ. ಅದು ನನ್ನ ಕೆಲಸವೂ ಅಲ್ಲ. ನಾನು ಜನತಾ ದಳ (ಯು) ಗೆ ಸೇರಿದವನು.

ನಮ್ಮ ಜಾರ್ಜ ಫರ್ನಾಂಡಿಸ್‌ರವರು ನನಗೊಂದು ಪಾಠ ಹೇಳಿ ಕೊಟ್ಟಿದ್ದರು. ಮಾನ್ಯ ನಿಂಗಪ್ಪನವರ ಕ್ಷೇತ್ರದಲ್ಲಿ ಎಲೆಕ್ಷನ್ ಪ್ರಚಾರಕ್ಕೆಂದು ನಾವು ಹೋಗಿದ್ದೇವು. ಮಾನ್ಯ ನಿಂಗಪ್ಪನವರು ಈಗ ಇಲ್ಲೇ ಇದ್ದಾರೆ. ಅಲ್ಲಿನ ಸಭೆಯೊಂದರಲ್ಲಿ 7 ಜನವೋ, 8 ಜನವೋ ಇದ್ದರು, ನಾನು ಮಾತನಾಡುವುದು ಬೇಡ, ಬನ್ನಿ ಸಾರ್ ಹೋಗೋಣ ಎಂದು ಫರ್ನಾಂಡಿಸ್‌ರವರಿಗೆ ಹೇಳಿದೆ. 'ಇಲ್ಲಪ್ಪ, ನಾವು ದಾಸಯ್ಯನ ಒಕ್ಕಲಿನವನು, ನಾನು ಹೇಳುವುದನ್ನು ಹೇಳಿಬಿಟ್ಟು ಹೋಗಿ ಬಿಡುತ್ತೇನೆ, ಅದನ್ನು ಕೇಳುವುದು ಅಥವಾ ಬಿಡುವುದು ದೇಶಕ್ಕೆ ಬಿಟ್ಟಿದ್ದು, ಗೋಡೆಗೆ ಬಿಟ್ಟಿದ್ದು, ಮರಕ್ಕೆ ಬಿಟ್ಟಿದ್ದು' ಎಂದು ಅವರು Bank scam ಬಗ್ಗೆ ಕುಣಿಗಲ್‌ನ ಎಲೆಕ್ಷನ್ ಪ್ರಚಾರದಲ್ಲಿ ಮೊದಲ ಬಾರಿಗೆ ಮಾತನಾಡಿದರು. ಏನ್ ಸಾರ್, ಇಂತಹ ಒಂದು issue ಬಗ್ಗೆ ಕುಣಿಗಲ್‌ನಲ್ಲಿ ಮಾತನಾಡುತ್ತಿದ್ದೀರಿ ಎಂದು ನಾನು ಅವರನ್ನು ಕೇಳಿದೆ. 'ಆತ್ಮ ಶುದ್ಧ ಇಟ್ಟುಕೊಂಡು

ಹೇಳುವುದನ್ನು ಹೇಳಿ ಬಿಡಬೇಕು, ಮಿಕ್ಕಿದ್ದು ಏನೋ turn ತೆಗೆದುಕೊಳ್ಳುತ್ತದೆ, ಯಾರೋ ಬರುತ್ತಾರೆ, ಏನೋ ಮಾಡುತ್ತಾರೆ' ಈ ಪಾಠವನ್ನು ನೀನು ಕಲಿತುಕೋ ಎಂದು ಅವರು ನನಗೆ ಹೇಳಿದರು.

ಹಾಗಾಗಿ ನೀವು ಎಷ್ಟೊತ್ತಿಗೇ ಕರೆದರೂ ನಾನು ಇಲ್ಲಿ ನಿಂತುಕೊಂಡು ಮಾತನಾಡುತ್ತಿದ್ದೇನೆ. ನನ್ನ ಕೆಲಸವನ್ನು ನಾನು ಮಾಡಿದೆ ಎನ್ನುವಂತಹ ಖುಷಿಯಲ್ಲಿ ಇಲ್ಲಿ ಹೇಳುತ್ತಿದ್ದೇನೆ. ದಯಮಾಡಿ ಇದರ ಬಗ್ಗೆ ಒಂದು ತನಿಖೆಯನ್ನು ನಡೆಸಬೇಕು. ಆ ತನಿಖೆಗೆ ಪೂರಕವಾದ ಎಲ್ಲಾ ಮಾಹಿತಿಗಳನ್ನು ನಾನು ಒದಗಿಸಿಕೊಡುತ್ತೇನೆ. ಇದು registered society. ಮಾನ್ಯ ಜಿ.ಟಿ. ದೇವೇಗೌಡರು ಮನಸ್ಸು ಮಾಡಿದರೆ ಮಾಹಿತಿಗಳನ್ನು ತರಿಸಿಕೊಳ್ಳಬಹುದು. ಇಸ್ಕಾನ್ is a registered society, not a trust. ಅದು society ಇಲ್ಲಿ ಮೊದಲೇ 'ಇಸ್ಕಾನ್ ಕರ್ನಾಟಕ' ಎಂಬ ಹೆಸರಿನಲ್ಲಿ society regester ಆಗಿತ್ತು. ಹರಿಖೋಡೆಯವರು ಮತ್ತು ಇತರರೆಲ್ಲರೂ ಸೇರಿ ರೂಂ ಒಂದರಲ್ಲಿ ಕುಳಿತುಕೊಂಡು ಕೃಷ್ಣನ ಭಜನೆ ಮಾಡುತ್ತಿದ್ದರು.

ಅದರ ಬ್ಯಾನರ್ ಕೆಳಗಡೆ ಈ ದೇವಸ್ಥಾನದ ನನ್ನದು ಎಂದು ಈತ claim ಮಾಡಿದಾಗ, ಅವರು ಕೋರ್ಟ್ ಮುಂದೆ ತಕ್ಷಣ object ಮಾಡಿ, ಮಧು ಪಂಡಿತ್ ದಾಸ್‌ಗೂ, ಇಸ್ಕಾನ್ ಕರ್ನಾಟಕಕ್ಕೂ ಸಂಬಂಧವಿಲ್ಲ ಎಂದು through advocates public notification ಹೊರಡಿಸಿ ಬಿಟ್ಟರು. So, he is neither connected with ISKCON Karnataka, nor connected with ISKCON India. He is a fraud. ಈ ಮನುಷ್ಯ ಅಲ್ಲಿ ಬಂದು, ಈ local unit ಅನ್ನು ನೋಡಿಕೊಳ್ಳುತ್ತೇನೆ ಎಂದು ಬಂದವನು, ಇವತ್ತು ಇಡೀ ಇಸ್ಕಾನ್ ಹೆಸರಿನಲ್ಲಿ ಅನ್ಯಾಯ ಮಾಡುತ್ತಿದ್ದಾನೆ. ದೇವರ ಹೆಸರಿನಲ್ಲಿ, ಆ temple ಇವತ್ತೇನಿದೆ ಅದರ ಹೆಸರಿನಲ್ಲಿ ಈ ಕಾರ್ಯಕ್ರಮಗಳನ್ನು ಆಗುತ್ತಿರುವುದರಿಂದ ನಮ್ಮ ಸರ್ಕಾರ ಮತ್ತು Corporation ಇದಕ್ಕೆ consideration ಕೊಡುತ್ತಿದೆ.

ಜೊತೆಗೆ ದೊಡ್ಡ ದೊಡ್ಡವರು, ನಮ್ಮ ನಾರಾಯಣ ಮೂರ್ತಿಯಂತಹವರು, ಅವರ ರಕ್ಷಣೆಗೆ ಇದ್ದಾರೆ. ಅವರಿಗೆ ಪದ್ಮವಿಭೂಷಣ ಕೊಡಿ ಎನ್ನುತ್ತಾರೆ, ಹೋಗಿದ್ದ ಕಡೆಗೆ 50 ಲಕ್ಷ ರೂ.ಗಳನ್ನು ಘೋಷಣೆ ಮಾಡುತ್ತಾರೆ, 1 ಕೋಟಿ ರೂ.ಗಳನ್ನು ಘೋಷಣೆ ಮಾಡುತ್ತಾರೆ, ಅವರು ಎಲ್ಲೆಲ್ಲಿ ಹೋದರೂ ಇವರನ್ನು ಕರೆದುಕೊಂಡು ಹೋಗುತ್ತಾರೆ, He is the next mentor of India ಎಂದು ಹೇಳಿ, ಈತನನ್ನು

project ಮಾಡಿಕೊಂಡು ಬರುತ್ತಿದ್ದಾರೆ. ದುರ್ದೈವ ಎಂದರೆ ಬೆಂಗಳೂರಿನಲ್ಲಿ Head Office ಇರುವ Infosys ನವರು ರಾಜಸ್ಥಾನಕ್ಕೆ ಹೋಗಿ 1 ಕೋಟಿ ರೂ.ಗಳನ್ನು ಕೊಟ್ಟು ಬಂದಿದ್ದಾರೆ. ಇಲ್ಲೇ ಆ ಹಣ ಕೊಟ್ಟಿದ್ದರೆ, ಕನಿಷ್ಠ ನಮ್ಮ ಮಕ್ಕಳು ಬದುಕಬಹುದಾಗಿತ್ತು. ಇದರ ಜೊತೆಗೆ ನಮ್ಮ Public Undertaking ನವರಿಗೆ ಎಲ್ಲಾದರೂ ಒಂದುಕಡೆ ನಾವು ನಿರ್ಬಂಧವನ್ನು ಹಾಕಲೇಬೇಕು ಸಾರ್. Mysore Minerals ನಂತಹವರು, ಹೇಳದೇ, ಕೇಳದೇ, ಅಕೌಂಟ್ ಇಲ್ಲದೆ 70–80 ಲಕ್ಷ ಕೊಡುವುದು ಸರಿಯಿಲ್ಲ. ಅವರ ಹತ್ತಿರ ದುಡ್ಡು ಹೆಚ್ಚು ಇದ್ದರೆ, ಅವರು ಅದನ್ನು ಸರ್ಕಾರಕ್ಕೆ ಕೊಟ್ಟುಬಿಡಲಿ. ಅದನ್ನು ಬಿಟ್ಟು ಇಂತಹವರಿಗೆ ಕೊಡುವುದು ಬೇಡ. ಇಂತಹವರಿಗೆಲ್ಲಾ ಹೋಗಿ ಹಣ ಕೊಟ್ಟು ಬೆಳೆಸುತ್ತಿರುವುದು ಸರಿಯಿಲ್ಲ.

ಅವರು ಬೆಂಗಳೂರಿನಲ್ಲೆಲ್ಲಾ ಜಮೀನು ಕೊಂಡುಕೊಂಡು ಇವತ್ತು real wstate business ಮಾಡುತ್ತಿದ್ದಾರೆ. Shopping Mall ಗಳನ್ನು ಮತ್ತು Heritage Park ಗಳನ್ನು ಮಾಡುತ್ತಿದ್ದಾರೆ. Theme Park ಹೆಸರಿನಲ್ಲಿ 25–40 ಎಕರೆ ತೆಗೆದುಕೊಂಡು, ಈಗ ಅದನ್ನು ಮಾರಾಟ ಮಾಡಲು ಜಾಹಿರಾತನ್ನು ಹೊರಡಿಸಿದ್ದಾರೆ. ಅದರಲ್ಲಿ rate ಗಳನ್ನೆಲ್ಲಾ ಅವರು ಹಾಕಿಬಿಟ್ಟಿದ್ದಾರೆ. ಅದು 2004 ರಲ್ಲೇ ಆಗಿದೆ. 3 Bed Room Flats - 19 lakhs, 3 Bed Room Flats : option I-24.31 lakhs, 3 Bed Room Flats : option II- 24.33 lakhs, Pent House 36.06 lakhs, ಈ ರೀತಿಯಾದ ರೇಟ್ಸ್ ಅನ್ನು ಅವರು ತಮ್ಮ ಜಾಹಿರಾತಿನಲ್ಲಿ ಕೊಟ್ಟಿದ್ದಾರೆ. ಈಗ ಬೆಂಗಳೂರು value ನಲ್ಲಿ ಇದರ ಮೌಲ್ಯ double ಆದರೂ ಆಗುತ್ತದೆ. ಇದೇನಿದು ಧಾರ್ಮಿಕ ಸಂಸ್ಥೆಯೋ? Commercial ಸಂಸ್ಥೆಯೋ ಎಂಬುದನ್ನು ಸರ್ಕಾರ ನಡೆಸುವವರು ನೋಡಬೇಕು.

ಮನಸ್ಸಿಗೆ ನೋವಾಗುವುದು ಏನೆಂದರೆ, 'ನಾನು implementing NGO' ಎಂಬುದರ ಬಗ್ಗೆ ಒಂದೇ ಒಂದು ಪದವನ್ನೂ ಸಹ ಅವರು ಯಾವುದೇ brochure ನಲ್ಲಿ ಹೇಳಿಲ್ಲ. ಕರ್ನಾಟಕ ಸರ್ಕಾರದ ಕಾರ್ಯಕ್ರಮವನ್ನು ಅನುಷ್ಠಾನ ಮಾಡುತ್ತಿರುವ NGO ನಮ್ಮದು ಎನ್ನುವಂತಹ ಒಂದು ಪದವನ್ನೂ ಅವರು ಬಳಸಿಲ್ಲ. ಇಷ್ಟೆಲ್ಲಾ ಸರ್ಕಾರ ಮಾಡಿ ಏನೆಲ್ಲಾ contributions ಕೊಟ್ಟರೂ, ಅದರ ಬಗ್ಗೆ ಅವರು ಹೇಳುವುದಿಲ್ಲ. ಇದಕ್ಕಾಗಿ ಕೇಂದ್ರ ಸರ್ಕಾರದವರು ಅಕ್ಕಿ ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದವರು ಕೊಟ್ಟಿರುವ ಅಕ್ಕಿ ಬಗ್ಗೆ ಅವರು 'dust ಇರುವ ಅಕ್ಕಿ ಕೊಟ್ಟಿರುತ್ತಾರೆ, ಅದನ್ನು clean ಮಾಡಲಿಕ್ಕೆ ಆಗುವುದಿಲ್ಲ' ಎಂದು ಪೇಪರ್‌ನಲ್ಲಿ

articles ಬರೆಸುತ್ತಾರೆ. Indian Express ನಂತಹ ಪೇಪರ್‌ನಲ್ಲೂ ಅವುಗಳು ಪ್ರಕಟವಾಗುತ್ತವೆ.' 'ಇಂತಹದ್ದೆಲ್ಲಾ ನಮಗೆ supply ಮಾಡುತ್ತಿದ್ದಾರೆ, ನಾವು ಅದನ್ನು ಕಷ್ಟಪಟ್ಟು ಶುದ್ಧಿ ಮಾಡಿಕೊಂಡು ಅಡುಗೆ ಮಾಡುತ್ತಿದ್ದೇವೆ' ಎಂದು ಅವರು ಬರೆಸಿಕೊಳ್ಳುತ್ತಾರೆ. ಇಂತಹ ಒಂದು ಸ್ಥಿತಿಯನ್ನು ಕರ್ನಾಟಕಕ್ಕೆ ಏಕೆ ತಂದರೋ ಗೊತ್ತಿಲ್ಲ? ಹಳ್ಳಿಗಳಲ್ಲಿ ನಮ್ಮ ಮಕ್ಕಳೂ ಕೂಡ ಊಟ ಮಾಡುತ್ತಿದ್ದಾರೆ.

ಎರಡನೆಯದಾಗಿ, ಒಂದು ಮಾತನ್ನು ನಾನು ಹೇಳಬೇಕಾಗಿದೆ. ನಾನು ಬೆಳಿಗ್ಗೆ ಮಾತನಾಡುತ್ತಾ ಇದೇನು ತಂಗಳೂಟವೋ? ಬಿಸಿಯೂಟವೋ? ಎಂದು ಕೇಳಿದೆ ಒಂದರಿಂದ ಒಂದೂವರೆ ಲಕ್ಷ ಮಕ್ಕಳಿಗೆ ಒಂದು ಕಿಚನ್‌ನಲ್ಲಿ ಅಡುಗೆ ಮಾಡಿ, ಅದನ್ನು vehicle ನಲ್ಲಿ ನಾವು 25–60 ಕಿ.ಮೀ ದೂರದವರೆಗೆ supply ಮಾಡುತ್ತೇವೆ ಎಂದರೆ, ಅದೇನು ಬಿಸಿಯೂಟವೋ ತಂಗಳೂಟವೋ ಎಂಬ ಬಗ್ಗೆ ತಾವೇ ಯೋಚನೆ ಮಾಡಬೇಕೆಂದು ನಾನು ಕೇಳುತ್ತೇನೆ. ಏಕೆಂದರೆ ಇವರು ಮೆಶಿನ್, ವೆಹಿಕಲ್ಸ್ ಇಟ್ಟುಕೊಂಡು ಎಲ್ಲರಿಗೂ ಕೊಟ್ಟುಕೊಂಡು ಬರುತ್ತಿದ್ದಾರೆ. ಇದರಿಂದ ನಮ್ಮ ಮಕ್ಕಳಿಗೇನಾದರೂ ಹೆಚ್ಚು ಕಮ್ಮಿಯಾದರೆ ಒಟ್ಟಿಗೆ ಲಕ್ಷಾಂತರ ಮಕ್ಕಳು ಮತ್ತು ತಂದೆತಾಯಂದಿರು ಬೀದಿಪಾಲಾಗುತ್ತಾರೆ. ಅದಕ್ಕೂ ಮೊದಲೇ ಸರ್ಕಾರದವರು ಎಚ್ಚರ ವಹಿಸಬೇಕು. ಈ ಎಲ್ಲದರ ಬಗ್ಗೆ ತನಿಖೆ ಮಾಡಬೇಕು. ಮಾನ್ಯ ಸಚಿವರಾದ ಶ್ರೀನಿವಾಸರವರು ಹೇಳಿದಂತೆ ಇದನ್ನು ಒಳ್ಳೆಯ ಸಮಯದಲ್ಲಿ raise ಮಾಡಿಲ್ಲ ಎಂಬುದು ನನಗೂ ಗೊತ್ತು. ಆದರೆ ಮಾಡಬೇಕಾದ ಕೆಲಸವನ್ನು ನಾನು ಮಾಡಿದ್ದೇನೆ. ನೋಡಿ

> " Indian Express, October 9, 2005 writes : "It is shaming evidence of the failure of Government - Some food for thought : If I told you that all it will empower all of India's destitute and dispossed children is Rs. 6000 crore i.e 0.2% of GDP a year. Would you believe me? No. you would not.You would point out correctly that the Government of India spends more than Rs. 40,000 crore a year on anti- poverty schemes and thousands of children continue to die of starvation in Maharashtra, one of

our States. You point out Correctly that thousands of Crores of rupees have been spent over the years on child welfare and development schemes and if you only drive through the streets of one of our metropolis to see how starved babies in the arms of mothers begging at traffic lights. It is shaming evidence of the failure of the government, but our political leaders and officials drive by cars with windows of dark glass in any case they chose not to see. An NGO called Akshaya Patra in Bangalore, I realize, that they have continued the idea, which is still the best one around if it can be implemented outside by government NGOs. Akshaya Patra is proved that at Cost of Rs.5/- a meal nutritious food we can feed the 10 crore Indian Children who live below poverty line. Akshaya Patra, 'the Government involvements is the kiss of death'. This is the comment we received in the Press. Government involvements is the kiss of death. I say this after examining the rice supplied to Akshaya Patra by the Food Corporation of India on an average of 50 Kgs bag of FCI Containing 3 Kgs of junk that includes not just pebbles and mud, but rusted nails and needles. The rice is cleaned for hours before it becomes usable. This is sadly the way official agencies work in our fine and wondrous land".

ನಾವು ಕೊಡುವ ಅಕ್ಕಿಗೆ commentary. ಅದೇ ಅಕ್ಕಿಯನ್ನು ಅವರಿಗೆ ಕೊಡಬೇಕಾಗಿದೆ. ಹೊಸಪೇಟೆಯ ಹತ್ತಿರ ಎಲ್ಲೋ ಹೋಗಿ ಮಿಲ್ ಮಾಡಿಸಿಕೊಂಡುಬಂದು ಕೊಡುತ್ತಿರುವ ಅಕ್ಕಿ. ಸರ್ಕಾರದ ಬಗ್ಗೆ ಇಷ್ಟೆಲ್ಲಾ ಅಗೌರವವಾಗಿ ಬರೆಸಿ ನಾನೊಬ್ಬನೆ ಒಬ್ಬ ಈ ದೇಶವನ್ನು ಉಳಿಸುತ್ತಿರುವವನೆಂದು ಪ್ರಚಾರ ಮಾಡಿಕೊಂಡು ಸರ್ಕಾರದ ದುಡ್ಡನ್ನು ಕ್ಲೈಮ್ ಮಾಡುತ್ತಿರುವವರ ವಿರುದ್ಧ ಸರ್ಕಾರವೇನಾದರೂ ಕ್ರಮ ಜರುಗಿಸದಿದ್ದರೇ ನೀವು ಕೂಡ ಇದರಲ್ಲಿ ಶಾಮೀಲಾಗಿದ್ದೀರೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಸತ್ಯನಾರಾಯಣ್ :- ಮಾನ್ಯ ಮಾಧುಸ್ವಾಮಿಯವರು ಮಧುಪಂಡಿತ್ ಶಾಸ್ತ್ರಿ ಸನ್ಯಾಸಿಗಳ ಬಗ್ಗೆ ಹೇಳಿದ ಕತೆಯನ್ನು ಕೇಳಿದ ಮೇಲೆ ನಮಗೆಲ್ಲ ಒಂದು ರೀತಿ ಛಾಪಾಕಾಗದ ಹಗರಣದ ತೆಲಗಿ, ವಿನಿವಿಂಕ್ ಶಾಸ್ತ್ರಿ, ಇವರನ್ನೆಲ್ಲ exemt ಮಾಡಿ ಅವರನ್ನು prosecution ನಿಂದ exemption ಮಾಡಬಹುದೆಂದು ನನ್ನ ಅನಿಸಿಕೆ!

ಅಧ್ಯಕ್ಷರು :- ಉತ್ತರವನ್ನು ಹೇಳುತ್ತೀರ?

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) :- ಮಾನ್ಯ ಸತ್ಯನಾರಾಯಣ್‌ರವರು ಯಾವಾಗಲೂ ಸಾಮಾನ್ಯವಾಗಿ 8 ಗಂಟೆಯ ಮೇಲೆ ಇರುವುದಿಲ್ಲ. ಆದರೂ ಇವತ್ತು ಇದ್ದಾರೆ. ಮಾನ್ಯ ಮಾಧುಸ್ವಾಮಿಯವರು ಈ ವಿಚಾರದಲ್ಲಿ ಬಹಳ ಬೆಳಕನ್ನು ಚೆಲ್ಲಿದ್ದಾರೆ. ಕೆಲವರಿಗೆ ಇದು ಆಶ್ಚರ್ಯಕರವಾಗಿ ಕಂಡಿದ್ದರೂ, ವಾಸ್ತವಿಕವಾದ ವಿಚಾರವನ್ನು, ಸತ್ಯವನ್ನು ಸದನದಲ್ಲಿ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಸಮಯ 10 ಗಂಟೆಯಾಗುತ್ತ ಬಂದಿದೆ, ಎಲ್ಲಾ ಸದಸ್ಯರು ಸದನದಲ್ಲಿಲ್ಲ, ಮಾಧ್ಯಮದವರೂ ಕಡಿಮೆ ಜನರಿದ್ದಾರೆ, ಇಂತಹ ಬಹಳ ಪ್ರಮುಖವಾದ ವಿಚಾರ ಕೊನೆಯಲ್ಲಿ ಕೈಗೆತ್ತಿಕೊಂಡಿರುವುದು ಸೂಕ್ತವಲ್ಲವೆಂದು ಅನ್ನಿಸುತ್ತಿದೆ. ಇವತ್ತು ಕೊನೆಯ ದಿವಸವಾಗಿದ್ದರಿಂದ ಅನೇಕ ಕಾರ್ಯಕ್ರಮಗಳ ಮಧ್ಯದಲ್ಲಿ ಇದನ್ನು ತೆಗೆದುಕೊಳ್ಳುವುದು ಅನಿವಾರ್ಯ. ಕೊನೆಯಪಕ್ಷ ಸದನದ ಕೊನೆಯ ದಿವಸ ಕೊನೆಯ ಘಳಿಗೆಯಲ್ಲಾದರೂ ಈ ರಾಜ್ಯದಲ್ಲಿ ಇಂತಹ ಸಂಸ್ಥೆಗಳಿಂದ ಸರ್ಕಾರಕ್ಕೆ, ಸಾರ್ವಜನಿಕರಿಗೆ ಯಾವ ರೀತಿಯಾಗಿ ಚೀಟ್ ಆಗುತ್ತಿದೆಯೆಂಬ ಸತ್ಯವನ್ನೇನು ಪ್ರಸ್ತಾಪಿಸಿದ್ದಾರೆ ಅದನ್ನು ಸರ್ಕಾರ ಒಪ್ಪಲೇ ಬೇಕಾಗುತ್ತದೆ.

ನಾವು ಸರ್ಕಾರದಲ್ಲಿದ್ದೇವೆಂದು ಇದು ಆಗಿಲ್ಲವೆಂದು ಉದ್ಧಟತನದಿಂದ ಉತ್ತರ ಕೊಡುವುದು ನನಗಂತೂ ಸಮಾಧಾನವಿಲ್ಲ. ನಾನೂ ಈ ಸಂಸ್ಥೆಗೆ ಎರಡು ಮೂರು ಬಾರಿ ಭೇಟಿಕೊಟ್ಟಿದ್ದೇನೆ. ಮಾನ್ಯ ಮಾಧುಸ್ವಾಮಿಯವರು ಹೇಳಿದಂತೆ ಅಲ್ಲಿ ಇದು ಸರ್ಕಾರ ಕಾರ್ಯಕ್ರಮ, ಎನ್.ಜಿ.ಓ ದವರು ಸರ್ಕಾರದ ಕಾರ್ಯಕ್ರಮವನ್ನು ನಡೆಸುತ್ತಿದ್ದಾರೆಂದು ಎಲ್ಲೂ ಕಾಣುವುದಿಲ್ಲ. ಅದನ್ನು ಎಲ್ಲೂ ನೋಡಿಲ್ಲ. ಬಹಳ ಜನರ ಮನಸ್ಸಿನಲ್ಲಿ ಉಚಿತವಾಗಿ ಊಟವನ್ನು ಕೊಡುತ್ತಿದ್ದಾರೆಂಬ ಭಾವನೆ ಇದೆ. ಆದರೆ, ಚುಂಚನಗಿರಿ, ಸಿದ್ಧಗಂಗೆಯಂತಹ ಅನೇಕ ಸಂಸ್ಥೆಗಳು ನಿಜಕ್ಕೂ ಒಳ್ಳೆಯ ಕೆಲಸವನ್ನು ಸಾರ್ವಜನಿಕರಿಗೆ ಮಾಡುತ್ತಿವೆ. ಆದರೆ ಇದೊಂದು ದೊಡ್ಡ ಕಳಂಕವಿರುವ ಸಂಸ್ಥೆ ಇದ್ದಂತೆ. ಇವತ್ತಿನ ರಾಜಕೀಯ ವ್ಯವಸ್ಥೆಯಲ್ಲಿ ಅವರು ಸರ್ಕಾರದ ಬಗ್ಗೆ ಮ್ಯಾಗಜೀನ್‌ನಲ್ಲಿ ಪ್ರಿಂಟ್ ಹಾಕಿರತಕ್ಕದ್ದು ಸರಿಯಲ್ಲ, ಸರ್ಕಾರವೆಂದರೆ ಯಾರೋ ಒಬ್ಬ ವ್ಯಕ್ತಿ ನಡೆಸತಕ್ಕದ್ದಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಐದುಕೋಟಿ ಪ್ರತಿನಿಧಿಯಾಗಿ ಒಬ್ಬ ಕುಮಾರಸ್ವಾಮಿಯವರು ಕೆಲಸ ಮಾಡುತ್ತಿದ್ದಾರೆ.

ಈ ರಾಜ್ಯದಲ್ಲಿ ಜನರ ಹಣವನ್ನು ದುರುಪಯೋಗ ಮಾಡಿ ಸರ್ಕಾರದ ಇಷ್ಟೊಂದು ಸವಲತ್ತನ್ನು ಪಡೆದು ತೆರಿಗೆಯಲ್ಲಿ ನೂರಕ್ಕೆ ನೂರು ವಿನಾಯಿತಿಯನ್ನು ತೆಗೆದುಕೊಂಡು ಇಂತಹ ಒಂದು ಹೇಳಿಕೆಯನ್ನು ಪ್ರಿಂಟ್ ಹಾಕಿಸುವ ಮಟ್ಟಕ್ಕೆ ಅವರು ಹೋಗಿದ್ದರೆ ಇದು ನಮ್ಮ ಗಮನಕ್ಕೆ ಬಾರದೇ ಆಕಸ್ಮಿಕವಾಗಿ ಆಗಿದೆಯೆಂದು ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲವೆಂದರೆ ಇದು ಒಂದು ರೀತಿಯಲ್ಲಿ ಸರಿಯಲ್ಲ. ಸರಿ ಇಲ್ಲದಿರುವುದನ್ನು ನಾನು ಡಿಫೆಂಡ್ ಮಾಡಿಕೊಳ್ಳಲು ಸಾಧ್ಯವಿಲ್ಲ. ಇದರಲ್ಲಿ ಕೆ.ಐ.ಎ.ಡಿ.ಬಿ. ವಿಚಾರದ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಕಾರ್ಪೋರೇಷನ್‌ನವರು ರಿನೀವಲ್‌ಗೆ ಸಹ ಅಪ್ಲೈ ಮಾಡಿದ್ದಾರೆ. ಇನ್ನೂ ಅದನ್ನು ಮಾಡಿಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. ಉಳಿದಂತೆ ಅನೇಕ ಕಮರ್ಶಿಯಲ್ ಆಗಿ ಇವತ್ತು industrial ಮತ್ತು ಬೇರೆ ಬೇರೆಯದಕ್ಕೆ ಜಾಗವನ್ನು ಕೊಡತಕ್ಕದ್ದು, exemption ಕೊಡತಕ್ಕದ್ದನ್ನು ಮಾಡುತ್ತಿದ್ದೇವೆ. ಅದರಿಂದ ನಮ್ಮ ಸಾರ್ವಜನಿಕರಿಗೆ ಉದ್ಯೋಗ ಸಿಗುತ್ತದೆ, ಉದ್ದಿಮೆಗಳು ಬರುತ್ತವೆ, industries improve ಆಗುತ್ತದೆ ಆ ಮೂಲಕ ಈ ರಾಜ್ಯ ಆರ್ಥಿಕವಾಗಿ ಬೆಳೆಯುತ್ತದೆ ಎಂಬ ದೃಷ್ಟಿಯಿಂದ ನಾವು ಅವರಿಗೆ ಸಾರ್ವಜನಿಕ ಆಸ್ತಿಯನ್ನು ಕೊಡತಕ್ಕ ಕೆಲಸವನ್ನು ಮಾಡುತ್ತೇವೆ.

ಆದರೆ ಇಷ್ಟೊಂದು ದುರುಪಯೋಗವನ್ನು ಒಂದು international ಮಟ್ಟದಲ್ಲಿರುವ ಸಂಸ್ಥೆಯ ಹೆಸರನ್ನು ದುರುಪಯೋಗ ಮಾಡಿಕೊಂಡು ಈ ರೀತಿ

ಆಗುತ್ತಿರತಕ್ಕದ್ದು ಬಹಳ ಶೋಚನೀಯ. ಇದರ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಸಹ ಕೇಸ್ ಇದೆ ಎಂಬುದನ್ನು ವ್ಯಕ್ತಪಡಿಸುತ್ತಿದ್ದಾರೆ. ಆ ರೀತಿ ಕೇಸು ಇರತಕ್ಕ ಸಂದರ್ಭದಲ್ಲಿ ನಾವು ಎಷ್ಟರಮಟ್ಟಿಗೆ ತಕ್ಷಣ ಕ್ರಮ ತೆಗೆದುಕೊಳ್ಳಲು ಸಾಧ್ಯ ಎಂಬ ಬಗ್ಗೆ ಸರ್ಕಾರ ಚಿಂತನೆ ಮಾಡಿ ಕನಿಷ್ಟ ಇದರ ಬಗ್ಗೆ ತನಿಖೆ ಮಾಡಿಸುವುದು ಒಂದು ಕೆಲಸವಾದರೆ, ತನಿಖೆ ಮಾಡಿಸುವುದಕ್ಕಿಂತ ನಾಳೆ ತಕ್ಷಣಕ್ಕೇನು ಮಾಡಲು ಸಾಧ್ಯವೆಂಬ ಬಗ್ಗೆ ಯೋಚನೆ ಮಾಡಬೇಕಾಗಿದೆ. ಇವತ್ತು ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರು ಇಲ್ಲದಿದ್ದರೂ ಸಹ ಮಾನ್ಯ ಮಾಧುಸ್ವಾಮಿಯವರೇನು ಹೇಳಿದ್ದಾರೆ ಆ ರೀತಿ ಆಗತಕ್ಕ ಪ್ರಶ್ನೆ ಇಲ್ಲ. ನಾನು ಸ್ಪಷ್ಟವಾದ ಭರವಸೆಯನ್ನು ಸರ್ಕಾರದ ಪರವಾಗಿ ಮಾನ್ಯ ಮಾಧುಸ್ವಾಮಿಯವರಿಗೆ ಕೊಡಲು ಬಯಸುತ್ತೇನೆ.

ನಾನು ಇಲ್ಲಿ ನಿಂತು ಮಾತನಾಡುತ್ತಿರುವುದರಿಂದ ಬಹುಶಃ ಸ್ವಲ್ಪ ಸಮಾಧಾನದಿಂದ ಮಾತನಾಡುತ್ತಿದ್ದೇನೆ. ನನಗೆ ಇನ್ನೂ ಉದ್ವೇಗವಾಗುತ್ತಿದೆ, ಅವರ ಪಕ್ಕದಲ್ಲಿ ಕುಳಿತು ಮಾತನಾಡಿದ್ದರೆ ಉದ್ವೇಗದಿಂದ ಮಾತನಾಡುತ್ತಿದ್ದೇನೇನೋ, ಅವರು ಅಷ್ಟೊಂದು ವಾಸ್ತವಿಕವಾದ ಸಂಗತಿಯನ್ನು ಸದನಕ್ಕೆ ಬಿಚ್ಚಿಟ್ಟಿದ್ದಾರೆ. ಇದರ ಬಗ್ಗೆ ನಾನು ಸಂಬಂಧಪಟ್ಟವರ ಜೊತೆ ದೀರ್ಘವಾದ ಚರ್ಚೆಯನ್ನು ಮಾಡಿ, ನಾಳೆ ಮುಖ್ಯಮಂತ್ರಿಯವರು, ಗೃಹ ಸಚಿವರ ಜೊತೆ ಚರ್ಚೆ ಮಾಡಿ ತಕ್ಷಣ ಕೆ.ಎ.ಐ.ಡಿ.ಬಿ ಬಗ್ಗೆ ರಿನೀವಲ್ ಬಗ್ಗೆ ಕ್ರಮ ಕೈಗೊಳ್ಳಬಹುದು. ಬೇರೆಯದರ ಬಗ್ಗೆ ಸರ್ಕಾರವೇನು ಕ್ರಮ ತೆಗೆದುಕೊಳ್ಳಬಹುದೋ ಅದರ ಬಗ್ಗೆ ಹೆಜ್ಜೆಯನ್ನಿಟ್ಟು ತನಿಖೆ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಕೇಸು ಇರುವುದರಿಂದ ಯಾವ ರೀತಿ ತನಿಖೆ ಮಾಡಿಸುವುದರಿಂದ ಸತ್ಯವನ್ನು ಹೊರಕ್ಕೆ ತರಲು ಸಾಧ್ಯ, ಈ ರೀತಿಯ ಅನಾಹುತವನ್ನು ನಿಲ್ಲಿಸಲು ಸಾಧ್ಯ ಎಂಬುದರ ಬಗ್ಗೆ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ. ಸದನದ ಕೊನೆಯ ದಿವಸದಲ್ಲಿ ಈ ಉತ್ತರವನ್ನು ಕೊಡುತ್ತಿರುವುದರಿಂದ ಇದರಲ್ಲಿ ಸಂಪೂರ್ಣವಾದ ಸಮಾಧಾನ ಆಗುತ್ತದೆಂದು ಹೇಳಲು ಸಾಧ್ಯವಿಲ್ಲ.

ಆದರೆ ಮಾಧುಸ್ವಾಮಿಯವರಿಗೆ ಬೇರೆ ಸಂದರ್ಭಗಳಲ್ಲಿ ಸರ್ಕಾರ ಉತ್ತರ ಕೊಡುವುದರಲ್ಲಿ ಟೆಕ್ನಿಕಲ್ ಅಥವಾ ಲೀಗಲ್ ಆಗಿ ನಾವು ಮಾಡಲು ಆಗದೇ ಇರತಕ್ಕ ಪರಿಸ್ಥಿತಿಯಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎದುರಿಸತಕ್ಕದ್ದನ್ನು ನೋಡಿದ್ದೇವೆ. ಆದರೆ ಈ ವಿಚಾರದಲ್ಲಿ ಯಾವುದೇ ತರಹದ ಅನುಮಾನಬೇಡ ಸ್ಪಷ್ಟವಾದ ಒಂದು ನಿಲುವಿಗೆ ಸರ್ಕಾರ ಬರುತ್ತದೆ, ತನಿಖೆಯನ್ನು ಆರಂಭಿಸುವುದಕ್ಕೆ ಯಾವ ರೀತಿಯ ತನಿಖೆ ಮಾಡಿಸಬೇಕೆನ್ನುವ ಬಗ್ಗೆ ಕೂಡ ನಾವು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಮತ್ತೆ ತತ್‌ಕ್ಷಣ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದರ ಬಗ್ಗೆ ನನಗೆ ಈಗಾಗಲೇ ಗೃಹ ಸಚಿವರು ಒಂದು ಪತ್ರವನ್ನು ಕಳುಹಿಸಿ, ನೀವು ಸ್ಪಷ್ಟವಾದ ಉತ್ತರವನ್ನು ಕೊಡಿ, ಅದರ ಬಗ್ಗೆ ನಾವು ನಾಳೆ ಕುಳಿತು ನಾವು ನೀವು ಮುಖ್ಯಮಂತ್ರಿಗಳ ಜೊತೆ ಮಾತನಾಡಿ, ಸ್ಪಷ್ಟವಾದ ಒಂದು ನಿಲುವನ್ನು ಸದಸ್ಯರಿಗೆ ಮತ್ತು ಪತ್ರಿಕೆಗಳಿಗೂ ತಿಳಿಸೋಣವೆಂದು ಅವರು ತಿಳಿಸಿದ್ದಾರೆ. ದಯಮಾಡಿ, ಈ ಬಗ್ಗೆ ಮಾಧುಸ್ವಾಮಿಯವರೇನು ಹೇಳಿದ್ದಾರೆ, ಈ ರಾಜ್ಯದ ಹಾಗೂ ಜನರ ಹಿತದೃಷ್ಟಿಯಿಂದ, ರಾಜ್ಯದ ಗೌರವದ ವಿಚಾರವೆಂದು ಕೂಡ ಸರ್ಕಾರ ಪರಿಗಣಿಸುತ್ತದೆ ಬಹಳ ಗಂಭೀರವಾದ ರೀತಿಯಲ್ಲಿ ಈ ವಿಚಾರದಲ್ಲಿ ಸರ್ಕಾರ ಹೆಜ್ಜೆಯನ್ನು ಇಡುತ್ತದೆಂದು ಸದಸ್ಯರಿಗೆ ನಾನು ತಮ್ಮ ಮೂಲಕ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ನಿಂಗಪ್ಪ :– ಮಾನ್ಯ ಅಧ್ಯಕ್ಷರೆ, ನಾನು ಮೊದಲ ದಿವಸದಿಂದಲೂ ಕೇಳುತ್ತಿದ್ದೇನೆ.

ಅಧ್ಯಕ್ಷರು :– ನಿಂಗಪ್ಪನವರೆ, ನಿಮಗೆ ಅವಕಾಶ ಕೊಡುತ್ತೇನೆ. ಈಗ ಹಂಪನಗೌಡ ಪಾಟೀಲ್, ಜೆ.ಸಿ. ಮಾಧುಸ್ವಾಮಿ, ಎಸ್.ಎಸ್. ಪಾಟೀಲ್ ಇವರು ಕರ್ನಾಟಕ ಎಣ್ಣೆಬೀಜ ಬೆಳೆಗಾರರ ಮಹಾಮಂಡಳಿಯ ಬಗ್ಗೆ ಕೇಳುತ್ತೀರಾ?

ಶ್ರೀ ಜೆ.ಸಿ ಮಾಧುಸ್ವಾಮಿ :– ಅದು ಇದಕ್ಕಿಂತ ದೊಡ್ಡ ಸ್ಕ್ಯಾಂಡಲ್ ಸರ್, ಈಗ ಅದನ್ನು ತೆಗೆಯಬೇಕು. ಅದೂ ಒಂದು ಸ್ಕ್ಯಾಂಡಲ್, ಅದನ್ನು ಯಾವಾಗಲಾದರೂ ತೆಗೆದುಕೊಳ್ಳುತ್ತೇನೆ ಬಿಡಿ.

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :– ಮಾನ್ಯ ಅಧ್ಯಕ್ಷರೆ, 5 ಗಮನ ಸೆಳೆಯುವ ಸೂಚನೆ ಇದೆ, ಒಂದು ಖಾಸಗಿ ನಿರ್ಣಯವಿದೆ, ಅವೆಲ್ಲವನ್ನು ಮಾಡಬೇಕಾದರೆ ಬೆಳಗಿನ ಜಾವ 4:00 ಗಂಟೆಯಾಗುತ್ತದೆ.

ಶ್ರೀ ಆರ್. ಆಲಂಗೂರು ಶ್ರೀನಿವಾಸ್ :– ಸ್ವಾಮಿ, ನಾಳೆ ಅಂಬೇಡ್ಕರ್ ಜಯಂತಿ ಕಾರ್ಯಕ್ರಮಕ್ಕೆ ಹೋಗಬೇಕು.

ಅಧ್ಯಕ್ಷರು :– ಆಯಿತು ಸ್ವಾಮಿ, ಸಚಿವರೇ ಹೀಗೆ ಹೇಳಿದರೆ ಹೇಗೆ, 12 ಗಂಟೆಯಾದರೂ ಕುಳಿತಿರಬೇಕು, 1 ಗಂಟೆಯಾದರೂ ಕುಳಿತಿರಬೇಕು, ಧ್ರುವನಾರಾಯಣ್, ನೀವು ಗಮನ ಸೆಳೆಯುವ ಸೂಚನೆಯನ್ನು ಕೇಳಿ ಬಿಡಿ, ಸಂಬಂಧಪಟ್ಟ ಸಚಿವರಿದ್ದಾರೆ ಹೇಳುತ್ತಾರೆ.